ಅಪರಂಜಿ

ಸಂಪುಟ ೬
ಜನವರಿ ೧೯೮೯
ಸಂಚಿಕೆ ೪

ತಿಳಿನಗೆಯ ಕಾರಂಜಿ



- ಲೀಲಾ ಮಿರ್ಲೆ
- ಕವಿಕುಲಲಾಮ
- ಆಭಾ
- ವಿಕಟಕವಿ
- ಶಿವು
- ಆನಂದ್
- ಪುಟ್ಟಶಾಮು
- [illegible]

ಬಿಡಿ ಪ್ರತಿ : ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೭ ಜನವರಿ ೧೯೮೯ ಸಂಚಿಕೆ ೪

ಚಂದಾ ವಿವರ :

ಬಿಡಿ ಪ್ರತಿ :
ಒಂದೂವರೆ ರೂಪಾಯಿ
ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 150 ರೂ.
ಪೋಷಕರು : 500 ರೂ.

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :
ಅಪರಂಜಿ ಕಾರ್ಯಾಲಯ
119 [ಹಳೆಯ 36]
6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಸಂಪಾದಕ :
ಶಿವಕುಮಾರ್

ಆಸ್ಪತ್ರೆಯಿಂದ ರೋಗಿ ಓಡಿ ಬರ್‍ತಾ ಇದ್ದ.

"ಯಾಕೋ ಓಡ್ತಾ ಇದ್ದಿ ?"

"ಆಪರೇಷನ್ ಟೇಬಲ್ ಮೇಲೆ ನನ್ನ ಮಲಗಿಸಿದ್ರು. ಆ ಹೆಡ್‌ನರ್ಸ್, ಏನೂ ಹೆದರ್ಕೋಬೇಡಿ. ಇದು ಬಹಳ ಸುಲಭದ ಆಪರೇಷನ್, ಅಂತ ಹೇಳ್ತಾ ಇದ್ಳು"..........

"ಅದು ನ್ಯಾಯಾನೇ. ಆದಕ್ಕೆ ನೀಯಾಕೆ ತಪ್ಪಿಸಿಕೊಂಡು ಓಡಿ ಬಂದೆ ?"

"ಅಯ್ಯೋ, ನಿಮಗೆ ಅರ್ಥ ಆಗೋಲ್ಲರೀ. ಆಕೆ ಹಾಗೆ ಹೇಳಿದ್ದು ನನಗಲ್ಲ, ಡಾಕ್ಟರಿಗೆ !"

ಈ ಸಂಚಿಕೆಯಲ್ಲಿ......

ವ್ಯಂಗ್ಯ ಚಿತ್ರಗಳು ; ಬಾಗೂರು ಮಾರ್ಕಾಂಡೇಯ, ಅಶೋಕ್ ಜೋಷಿ

ಮುದ್ರಣ : ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ
ಬೆಂಗಳೂರು-560003. ದೂರವಾಣಿ : 342144

ಅ ಪ ರಂ ಜಿ

(ತಿಳಿನಗೆಯ ಕಾರಂಜಿ)

ಸಂಪುಟ–೬ ಜನವರಿ ೧೯೮೯ ಸಂಚಿಕೆ–೪

ಹಿರಣ್ಯನಾಭ–ಹದಿನಾರು ಕಲೆಗಳುಳ್ಳ ಪುರುಷನನ್ನು ತಿಳಿದಿರುವೆಯಾ ?

ಭಾರದ್ವಾಜ – ಇಲ್ಲ. ಸುಳ್ಳನ್ನು ಹೇಳುವವನು ಬೇರುಸಹಿತ ಒಣಗಿಹೋಗುತ್ತಾನೆ.

— ಪ್ರಶ್ನೆ

ಸುಕೇಶ ಭಾರದ್ವಾಜನು ಭಗವಂತ ಪಿಪ್ಪಲಾದನನ್ನು ಪ್ರಶ್ನಿಸುತ್ತಾ ತನಗೂ ಹಿರಣ್ಯನಾಭನಿಗೂ ನಡೆದ ಮೇಲಿನ ಮಾತುಕತೆಯನ್ನು ಹೇಳಿ ಆ ಪುರುಷನು ಎಲ್ಲಿರುವನು ಎಂದು ಕೇಳಿದನು.


ಭಗವಂತನಾದ ಪಿಪ್ಪಲಾದನು ಆ ಪುರುಷನು ಈ ಶರೀರದಲ್ಲಿದ್ದಾನೆ ಎಂದು ಹೇಳಿದನು.

ನಾವೂ ಕಣ್ಣುಕಣ್ಣುಬಿಡುತ್ತಾ ನಮ್ಮ ರಾಷ್ಟ್ರದ ಭಾಗ್ಯತಾರೆ ಉದಯಿಸುವುದೆಂದು ಎಂದು ಚಿಂತಿಸುತ್ತೇವೆ. ನಮ್ಮ ರಾಷ್ಟ್ರದ ಸಮಸ್ತ ಸಮಸ್ಯೆಗಳಿಗೂ ಕಾರಣನು/ರು ಎಲ್ಲಿರುವನು/ರು, ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇವೆ.

ಪಿಪ್ಪಲಾದನಿಗೆ ಷೋಡಶಕಲ ಪುರುಷನ ಜ್ಞಾನವಿತ್ತು. ನಮಗೋ ಏನೂ ತಿಳಿಯದೆ ದಿಗ್ಭ್ರಾಂತರಾಗಿದ್ದೇವೆ. ಸಮಸ್ಯೆಗಳು ಕಾರಣನು/ರು ಯಾರೋ ತಿಳಿಯದೆ ಅವು ಪರಿಹಾರವಾಗುವುದಿಲ್ಲ.

ಇಷ್ಟನ್ನಂತೂ ಹೇಳಬಹುದು. ಆ ಕಾರಣನು/ರು ನಮ್ಮಲ್ಲೇ ಇದ್ದಾನೆ/ರೆ. ಅವನಿಂ/ರಿಂದಲೇ ಎಲ್ಲೆಲ್ಲೂ ಜಗಳ, ಮೋಸ, ದುಡಿಯದೆ ಇದ್ದ ಗಂಟನ್ನೋ, ಸಾಲವನ್ನೋ ತಿಂದು ಇಂದು ಮಜಾಮಾಡುವ ಬುದ್ಧಿ. ತನ್ನ/ಮ್ಮನ್ನು ಬಿಟ್ಟು ಉಳಿದವರೆಲ್ಲರೂ ದೇಶಕ್ಕೆ ಭಾರವಾಗಿದ್ದಾರೆ ಎಂಬ ಧೋರಣೆ,.ಕೊಟ್ಟು, ಆಡಿದ ಮಾತಿನಲ್ಲಿ ಸುಳ್ಳು, ಕಪಟ. ದ್ರೋಹ ಇವು ಇಂದು ಸರ್ವೇಸಾಮಾನ್ಯವಾಗಿವೆ : ಸಾರ್ವಜನಿಕ ಶಿಸ್ತು ನಾಪತ್ತೆಯಾಗಿದೆ.

ನಮ್ಮ ನಾಡು ಕಳಾಹೀನತೆಯನ್ನು ಕಳೆದುಕೊಂಡು ಜ್ಞಾನ ದೀಧಿತಿಯಿಂದ ಬೆಳಗುವುದೆಂದು ? ಗಣರಾಜ್ಯ ದಿನದಂದೇ ಏಕಾಗಬಾರದು ಎಂದು ಅಪರಂಜಿ, ನಗಮೊಗದಿಂದ ಹಾರೈಸುತ್ತಾಳೆ.



“ ಇಲ್ಲೂ ಬಿಡಲ್ವಲ್ಲಪ್ಪ ನನ್ನ ”

ಅಪರಂಜಿ ಕಿಡಿ

ಹೊಸ ವರ್ಷದಲ್ಲಿ ಹಿಂಸೆ, ವೈಷಮ್ಯತೆಗಳ ದಳ್ಳುರಿ ನಂದಿಹೋಗಿ, ಹಾಸ್ಯದ ಕಿಡಿಗಳು ಮಾತ್ರ ಹಾರಲಿ ಎಂದು ಅಪರಂಜಿ ಪ್ರಾರ್ಥಿಸುತ್ತಾಳೆ.

*　　*　　*　　*

ಹೊರನಾಡಿನಲ್ಲಿ ಕನ್ನಡದ ಕಂಪು ಹರಡಲು ಕರೆ

— ದೆಹಲಿಯಲ್ಲಿ ಶ್ರೀ ಬೊಮ್ಮಾಯಿ

ಕರ್ನಾಟಕದಲ್ಲಿ ಸಾಧ್ಯವಿಲ್ಲ ಅಂತಲೋ !

*　　*　　*　　*

ಪ್ರತ್ಯಕ್ಷ ತೆರಿಗೆ ಕಾನೂನಿಗೆ ಶೀಘ್ರ ತಿದ್ದುಪಡಿ

— ಪತ್ರಿಕೆ

ಹೌದು ಅದು, ಅಂತರ್ಧಾನವಾದರೇ ಸರಿ !

*　　*　　*　　*

ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು ಇಂದು ತರಗತಿಗೆ

— ಸುದ್ದಿ

ಇದೂ ಸುದ್ದಿಯಾಗುವಂತಹ ದಿನಗಳೇ ಇವು ಅಂತ ಅಪರಂಜಿ ಚಕಿತಳಾದಳಂತೆ !

*　　*　　*　　*

ನಾನು ದೂರದರ್ಶನ ಅಷ್ಟಾಗಿ ನೋಡುವುದಿಲ್ಲ

— ರಾಜೀವ್ ಗಾಂಧಿ

ಕನ್ನಡಿಯಲ್ಲಿ ಕಂಡಾತನೇ ಕಾಣುತ್ತಾನೆಂದಿರಬಹುದು !

ಮಲ್ಲೇಶ್ವರ ಸಹಕಾರ ಬ್ಯಾಂಕ್‌ನಲ್ಲಿ 5.5 ಲಕ್ಷ ರೂ. ದುರುಪಯೋಗ

— ಸುದ್ದಿ

ನಾಪತ್ತೆಯಾದ ಕ್ಯಾಷಿಯರ್ ಅವರಿಗಂತೂ ಸಹಕಾರ ಸಿಕ್ಕಿರುವಂತಿದೆ !

*   *   *   *

ಅಮೆರಿಕದಲ್ಲಿ ಬೃಹತ್ ದೂರದರ್ಶನ ಕುಸಿದುಬಿತ್ತಂತೆ

— ಪತ್ರಿಕೆ

ಗ್ರಹ–ಚಾರ !

*   *   *   *

ಭಾರತದ ನಾಯಕ ವೆಂಗ್‌ಸರ್ಕಾರ್ ಅವರನ್ನು ಸೋಪಿನ ಜಾಹೀರಾತಿನಲ್ಲಿ ನೋಡಿ, ಅವರು ಕ್ಯಾಚ್ ಹಿಡಿಯುತ್ತಾರೋ ಅಂತ ಸಂದೇಹ ನಮಗೆ !

7

ಆರ್ಟ್ ಫಿಲ್ಮ್

—ಲೀಲಾ ಮಿರ್ಜ

ಯಾವುದೋ ಒಂದು ಆರ್ಟ್ ಫಿಲ್ಮನ್ನು ದಿನಪತ್ರಿಕೆಯಲ್ಲಿ ಕೊಂಡಾಡಿದ್ದರು. ಮುಂದಿನ ವಾರವೇ ಅದನ್ನು ಟೀ.ವಿ. ಯಲ್ಲಿ ಪ್ರದರ್ಶಿಸುವ ಪ್ರೋಗ್ರಾಂ ಇತ್ತು. ಇಂತಹ ಒಳ್ಳೆಯ ಚಿತ್ರವನ್ನು ತಪ್ಪಿಸಿಕೊಳ್ಳಬಾರದೆಂದು ಅಂದು ಟೀ.ವಿ. ಮುಂದೆ ಪಟ್ಟಾಗಿ ಕೂತೆ. ಸರಿ. ಚಿತ್ರ ಪ್ರಾರಂಭವಾಯಿತು.

ಮೊದಲ ದೃಶ್ಯದಲ್ಲಿ ಒಂದು ಬಯಲು ಪ್ರದೇಶ ಅಲ್ಲಿರುವ ಒಂದೇ ಒಂದು ಒಣಗಿದ ಮರದ ಮೇಲೆ ಪಕ್ಷಿಯೊಂದು ಕುಳಿತಿದೆ. ಹಿನ್ನೆಲೆಯ ಗಾನವಿಲ್ಲ, ಎಲ್ಲಾ ನಿಶ್ಶಬ್ದ. ಪಕ್ಷಿ ಕ್ಷಣಕ್ಕೊಮ್ಮೆ ಒಂದು ಒಣ ರೆಂಬೆಯಿಂದ ಇನ್ನೊಂದಕ್ಕೆ ಕುಪ್ಪಳಿಸುತ್ತದೆ. ಐದು ನಿಮಿಷವಾದರೂ ದೃಶ್ಯ ಬದಲಾಗಲಿಲ್ಲ. "ಏನೋ, ಎಷ್ಟೊತ್ತೋ ಇದನ್ನ ನೋಡೋದು?" ಎಂದೆ. ವಾತಾವರಣವನ್ನು ಕ್ರಿಯೇಟ್ ಮಾಡಕ್ಕೆ ಹಾಗೆ ತೋರಿಸ್ತಾರೆ, ಸ್ವಲ್ಪ ತಾಳಿ" ಎಂದ ನನ್ನ ಮಗ. ಆನಂತರ ಹಳ್ಳಿಯ ದಾರಿಯಲ್ಲಿ ಎತ್ತಿನ ಗಾಡಿಯೊಂದು ಹೋಗುತಿ ದೆ. ಗಾಡಿಯಲ್ಲಿ ಕುಳಿತಿರುವ ಹಳ್ಳಿಯ ಹೆಂಗಸು ದುಃಖಭರಿತಳಾಗಿದ್ದಾಳೆ. ಕ್ಷಣಕ್ಕೊಮ್ಮೆ ಕಣ್ಣು ಒರೆಸಿಕೊಳ್ಳುತ್ತಿದ್ದಾಳೆ. ಜೊತೆಯಲ್ಲಿರುವ ಮಗು ಆಗಿಂದಾಗ್ಗೆ ಚಪ್ಪಾಳೆ ತಟ್ಟುತ್ತೆ ಅಥವಾ ಮೂಗೊರೆಸಿಕೊಳ್ಳುತ್ತದೆ. ಎತ್ತಿನ ಗಾಡಿ ಕೇಳಬೇಕೆ? ಬಲು ನಿಧಾನವಾಗಿ ಸಾಗುತ್ತಿದೆ, ಇನ್ನು ಅದು ಊರನ್ನು ಸೇರಲು ಎಷ್ಟು ಹೊತ್ತಾಗುತ್ತದೋ ತಿಳಿಯದು. ಅವಳು ಬಸ್ಸನ್ನಾದರೂ ಹಿಡಿದಿದ್ದರೆ ಸಿನಿಮಾ ಬೇಗ ಮುಂದುವರಿತ್ತಿತ್ತು ಎನಿಸಿತು.

ಅಂತೂ ನಮ್ಮ ಹಳ್ಳಿಯ ಹೆಂಗಸು ಮನೆ ಸೇರಿದಳು. ಮನೆ ಸೇರಿದಳು ಎನ್ನುವುದಕ್ಕಿಂತ ಅಡುಗೆ ಮನೆ ಸೇರಿದಳು ಎಂದರೆ ಸೂಕ್ತ. ಮುಂದಿನ ಸುಮಾರು ಹೊತ್ತು ಅವಳು ರೊಟ್ಟಿ ಮಾಡುವುದನ್ನು ನೋಡುವ ಪುಣ್ಯ ನಮಗೆ ಲಭಿಸುತ್ತದೆ. ಒಟ್ಟು ಎಂಟು ರೊಟ್ಟಿ ಮಾಡಿದಳು. ಇದು ಆರ್ಟ್ ಫಿಲ್ಮ್ ಆದ್ದರಿಂದ ಆಟ್ಮಾಸ್ಫಿಯರನ್ನ ಸೃಷ್ಟಿಸಲು ಪ್ರತಿಯೊಂದನ್ನು ಕೂಲಂಕಷವಾಗಿ ತೋರಿಸುತ್ತಾರಾದ್ದರಿಂದ, ರೊಟ್ಟಿಯ ಜೊತೆಗೆ ನಂಜಿಕೊಳ್ಳಲು ಏನು ತರಕಾರಿ ಮಾಡುತ್ತಾಳೋ

ನೋಡೋಣ ಅಂದುಕೊಂಡೆ. ಆದರೆ ದೃಶ್ಯ ಬದಲಾಯಿತು. ಪಟ್ಟಣಕ್ಕೆ ಬಂದು ಬಿಟ್ಟೆವು.

ಒಂದು ಕಾರ್ಖಾನೆಯಲ್ಲಿ ಕಾರ್ಮಿಕರು ಸಂಪು ಮಾಡಿದ್ದಾರೆ. ಕೆಂಪು ಬಾವುಟವನ್ನು ಹಿಡಿದಿರುವ ಕೆಲಸಗಾರರು ವ್ಯವಸ್ಥಾಪಕರ ವಿರುದ್ಧವಾಗಿ ಕೂಗಾಡು ತ್ತಿದ್ದಾರೆ. ಇದು ನಡೆದೇ ನಡೆಯಿತು, ಏನಪ್ಪ, ಅಗ್ರೀಮೆಂಟ್ ಆಗೋ ತನಕ ತಾಳ್ಮೆಯಿಂದ ಕೂತಿರಬೇಕೆ ? ಅಡಿಗೆ ಮನೆಯ ದೃಶ್ಯವೇ ವಾಸಿಯಾಗಿತ್ತು ಅನಿಸಿತು.

ಚಿತ್ರವನ್ನು ನೋಡುತ್ತಾ, ನೋಡುತ್ತಾ ನನ್ನಲ್ಲಿ ಒಂದು ತರಹ ಮುಜುಗರ ಶುರುವಾಯಿತು. ನವರಸಗಳನ್ನೂ ಒಂದೇ ಚಿತ್ರದಲ್ಲಿ ಪ್ರದರ್ಶಿಸುವ ನಮ್ಮ ಮಸಾಲೆ ಮೂವಿಗಳನ್ನು ಜನ್ಮಾಂತರಗಳಿಂದ ನೋಡುತ್ತಿರುವವಳು ನಾನು ಭಾಷೆ ಅರ್ಥವಾಗದಿದ್ದರೂ, ಅವರ ಓವರ್ ಆ್ಯಕ್ಟಿಂಗ್, ಕಿರಿಚಾಟ, ನಗಾಟ, ಅಳಾಟಗಳಲ್ಲಿ ಎಲ್ಲಾ ತಿಳಿದುಬಿಡುತ್ತದೆ. ಈಗ ಒಂದು ಗಂಟೆಯ ಕಾಲವಾದರೂ ಚಿತ್ರದ ತಲೆಬುಡ ಅರ್ಥವಾಗಲಿಲ್ಲ. ಇದು ಕಬ್ಬಿಣದ ಕಡಲೆಯೇ ಸರಿ ! ಈ ನಮೂನೆಯ ಚಿತ್ರಗಳೆಲ್ಲ ಗೂಢಾರ್ಥಗಳೇ ಜಾಸ್ತಿ. ಅಂದರೆ, ನಮ್ಮ ವೇದೋಪನಿಷತ್ತುಗಳ ಹಾಗೆ ಅವಕ್ಕೆ ಮಹಾನುಭಾವರು ಭಾಷ್ಯಗಳನ್ನು ಬರೆದಿರುವ ಹಾಗೆ, ಈ ಚಿತ್ರ ಗಳಿಗೂ ಭಾಷ್ಯಗಳ ಪೂರಾ ಅವಶ್ಯಕತೆ ಇದೆ !

ಮುಂದಿನ ದೃಶ್ಯ ಸ್ವಲ್ಪ ಬೆಳಕನ್ನು ಚೆಲ್ಲಿತು. ಆ ಹೆಂಗಸು ಸಂಪು ಹಿಡಿದಿದ್ದ ಕಾರ್ಖಾನೆಯ ಒಬ್ಬ ಕಾರ್ಮಿಕನ ಹೆಂಡತಿ. ಸ್ಟ್ರೈಕ್‌ನಿಂದಾಗಿ ಅವರಿಗೆ ಸಂಸಾರ ಸಾಗಿಸುವುದು ಕಷ್ಟವಾಗಿದೆ. ಆದರೆ ಇವರ ಕಷ್ಟದಿಂದ ನಮ್ಮ ಮನಸ್ಸು ನೋಯದ ಹಾಗೆ ನಿರ್ಮಾಪಕರು ನೋಡಿಕೊಳ್ಳುತ್ತಾರೆ.

ಮುಂದೆ ನಾವು ಒಂದು ಹಾವು ಮುಂಗಸಿಯ ಹೋರಾಟ, ಶಾಲೆಯ ಹುಡುಗರ ವಾಲಿಬಾಲ್ ಪಂದ್ಯ, ಸಾಧು ಒಬ್ಬನು ಪಾಠ ಮಾಡುವುದು, ಕುರುಡ ಭಿಕ್ಷೆ ಬೇಡುವುದು, ಇತ್ಯಾದಿ ಹಲವಾರು ದೃಶ್ಯಗಳನ್ನು ನೋಡುತ್ತೇವೆ. ಸಿನಿಮಾ ವನ್ನು ಮರೆಯಬೇಡಿ ಎಂದು ಜ್ಞಾಪಿಸುವಂತೆ, ಮಧ್ಯೆ ಮಧ್ಯೆ ಹಳ್ಳಿಯ ಹೆಂಗಸು ಕಾಣಿಸಿಕೊಳ್ಳುತ್ತಾಳೆ

ಪತ್ರಿಕೆಯು ಅಷ್ಟು ಹೊಗಳಿದ ಮೇಲೆ ಇದರಲ್ಲೇನೋ ಇದೆ ನನಗೆ ತಿಳಿಯುತ್ತಿಲ್ಲ. ಅಷ್ಟೇ ಎನಿಸಿತು, ಇದ್ದ ಬುದ್ಧಿಯನ್ನೆಲ್ಲಾ ಉಪಯೋಗಿಸಿ ಇದರ ಅಂತರಾರ್ಥವನ್ನು ತಿಳಿಯಲು ಪ್ರಯತ್ನಿಸಿದೆ.

ನಮ್ಮ ಹೀರೋಯಿನ್ ಹೊಲದಲ್ಲಿ ಕೆಲಸಮಾಡಲು ಶುರುಮಾಡಿದಳು. ಸಾಕಷ್ಟು ರೀಲುಗಳ ಅನಂತರ ಹಲವಾರು ಅಕ್ಕಿ ಮೂಟೆಗಳು ಅವಳ ಮನೆಯ ಅಂಗಳದಲ್ಲಿ ಕಾಣಿಸಿಕೊಂಡವು. ಇನ್ನು ಮೂಟೆ ಬಿಚ್ಚಿ ಅನ್ನ ಮಾಡುವುದನ್ನ ತೋರಿಸುತ್ತಾರೇನೋ ಅಂತ ಅಂದುಕೊಂಡೆ. ಇಲ್ಲ, ಊಹೆ ತಪ್ಪಾಗಿತ್ತು. ಮುಂದಿನ ದೃಶ್ಯ ನಗರದ ಒಬ್ಬ ಶ್ರೀಮಂತನ ಮನೆ ಸಂತೋಷಕೂಟ ನಡೆಯುತ್ತಿದೆ ಊಟವಾದ ಅನಂತರ ಅತಿಥಿಗಳು ಕಾರುಗಳಲ್ಲಿ ಮನೆಗೆ ತೆರಳಿದರು.

ನನಗೆ ಈ ಚಿತ್ರ ಪತ್ತೇದಾರಿ ಕಾದಂಬರಿಗಳ ಸಮಸ್ಯೆಯನ್ನು ಒಡ್ಡಿತು. ಹೇಗಾದರೂ ಮಾಡಿ ಕಥೆಯನ್ನು ಅರ್ಥಮಾಡಿಕೊಳ್ಳಬೇಕೆಂದು ಮನಸ್ಸು ಹಠ ಹಿಡಿಯಿತು. ಕಷ್ಟಪಟ್ಟರೆ ಫಲವುಂಟು! ಕಥೆಯ ಈ ಭಾಗ ಅರ್ಥವಾಗೇ ಬಿಟ್ಟಿತು! ಹೀರೋಯಿನ್ನಳ ಮನೆಯ ಅಕ್ಕಿ ಮೂಟೆ— ಅಂದರೆ, ಅವಳು ಕಷ್ಟ ಪಟ್ಟು ದುಡಿದು ಭತ್ತವನ್ನು ಬೆಳೆದಿದ್ದಾಳೆ. ಶ್ರೀಮಂತರ ಮನೆಯಲ್ಲಿ ಅವರ ಪರಿವೆಯೇ ಇಲ್ಲದೆ ಆ ಅಕ್ಕಿಯಿಂದ ಪಲಾವ್ ಮಾಡಿ ತಿಂದು, ತೇಗಿ, ವ್ಯರ್ಥ ಮಾಡಿ ಹೋಗಿದ್ದಾರೆ. ಇದೇ ಇರಬೇಕು ಇದರ ಗೂಢಾರ್ಥ!

ಶಾಲೆಯಲ್ಲಿ ತಲೆಗೆ ಹತ್ತದ ಗಣಿತಕ್ಕಿಂತ ಈ ಚಿತ್ರ ಕಠಿಣವಾಗಿ ಕಂಡಿತು. ಗಂಟೆ ನೋಡಿದೆ. ಇನ್ನು ಕೇವಲ ಹತ್ತೇ ನಿಮಿಷ.


ಪುನಃ ಹಳ್ಳಿಯ ದೃಶ್ಯ, ಚುನಾವಣೆಯ ಜೀಪುಗಳ ಓಡಾಟ, ರಾಜಕಾರಣಿಗಳ ಭಾಷಣ (ನಿಜ ಜೀವನದಲ್ಲಿ ಕೇಳುವುದು ಸಾಲದೆಂದು!), ಅಡುಗೆ ಮನೆ ಕೋಳಿ ಜಗಳ ಹೀಗೆ ಹಲವಾರು ಸೀನುಗಳಾದ ಮೇಲೆ, ಕೊನೆಯ ಐದು ನಿಮಿಷ ಎತ್ತಿನ ಗಾಡಿ ಚಲಿಸುತ್ತಿರುವುದನ್ನು ತೋರಿಸಿದರು.

ಕ್ಯಾಮೆರಾದ ದೃಷ್ಟಿ ತಿರುಗುತ್ತಿರುವ ಚಕ್ರದ ಮೇಲೆ ಕೇಂದ್ರೀಕೃತವಾಗಿತ್ತು. ಆಹಾ! ಹೊಳೆಯಿತು. ಮಹಾತ್ಮರು 'ಜೀವನ ಚಕ್ರ' ಎಂಬ ಪದವನ್ನು ಆಗಾಗ್ಗೆ


ಬಳಸುತ್ತಾರೆ. ಜೀವನ ಚಕ್ರವೆಂದರೆ ಎತ್ತಿನ ಗಾಡಿಯ ಚಕ್ರವೆಂದು ತಿಳಿಯಿತು. ಅದಕ್ಕೇ ನಮ್ಮ ಜೀವನವೂ ಎತ್ತಿನ ಗಾಡಿಯಂತೆ ಕುಂಟುತ್ತಾ ಮುಂದೆ ಸಾಗುತ್ತದೆ ಎನ್ನುವುದನ್ನು ತೋರಿಸಿರಬೇಕು.

ಚಿತ್ರ ಮುಗಿದು ಜಾಹಿರಾತು ಶುರುವಾಯಿತು, ಜೀವ ಬಂದಂತಾಯಿತು.

ನಮ್ಮ ಬಣ್ಣ ಬಣ್ಣದ ಮಸಾಲೆ ಮೂವಿಗಳಿಗಂತೂ ಮೆದುಳು ಪಕ್ಕಕ್ಕಿಟ್ಟು ಸಿನಿಮಾ ನೋಡಿದರೂ ಪಟಕ್ಕನೆ ಎಲ್ಲಾ ಅರ್ಥವಾಗಿ ಬಿಡುತ್ತದೆ. ಶುರುವಾದ ಹದಿನೈದೇ ನಿಮಿಷದ ಮೇಲೆ ಕೊನೆ ಏನೆಂದು ಊಹಿಸಬಹುದು. ನಮ್ಮ ಊಹೆ ನಿಜವಾಗುತ್ತಿರುವುದನ್ನು ನೋಡುವುದರಲ್ಲೇ ನಮಗೆ ಸಂತೋಷ. ಆರ್ಟ್‌ಫಿಲ್ಮ್‌ಗಳು ಹಾಗಲ್ಲ. ಅವಕ್ಕೆ ಮೆದುಳಿನ ಪೂರಾ ಅವಶ್ಯಕತೆ ಉಂಟು. ಅಲ್ಲಾ, ನಾವು ಹೊಟ್ಟೆಪಾಡಿಗೆ ಮಾಡುವ ಕೆಲಸಗಳಲ್ಲೇ ಮೆದುಳನ್ನು ಉಪಯೋಗಿಸುವ ಅಭ್ಯಾಸವನ್ನು ಇಟ್ಟುಕೊಂಡಿಲ್ಲ. ಇನ್ನು ಮನರಂಜನೆಯ ಸಮಯದಲ್ಲಿ ಅದನ್ನು ಉಪಯೋಗಿಸಿ ಎಂದರೆ ಅದು ಯಾವ ನ್ಯಾಯ ?



"ಇದ್ದ ಬದ್ದ ಹಣಾನೆಲ್ಲಾ ಮನೆಕಟ್ಟೋಕ್ಕೆ ಹಾಕಿ. ಕೊನೇಗೆ ದೃಷ್ಟಿ ಗೊಂಬೆಗೆ, ನನ್ನಟ್ಟೇನೇ ಹಾಕ್ಬೇಕಾಯ್ತು ಕಣಣ್ಣ !"



ಪಿ. ಯು. ಸಿ. ವಿದ್ಯಾರ್ಥಿಗಳಿಂದ ಕಲ್ಲು ತೂರಾಟ—

ಸುದ್ದಿ

ವಿಕಾಸವಾದಕ್ಕೆ ಮತ್ತೊಂದು ಪುರಾವೆ.

ಗಜ಼ಲ್

— ಕವಿಶಾಲರಾಮ

ಪ್ರೀತಿ ದಾರಿ ಸಾತ್ಪು ಬಳಸಿ ಎಷ್ಟು ಹೋಗಿದೆ

ಹಾದಿಯಲ್ಲಿ ಅರಳಿದಂಥ ಹೂವು ಹೊಸಕಿಹೋಗಿದೆ

ಓ ಚಂಪಕ ನಾಸೆ

ಮಂದ ಮಂದ ಹಾಸೆ

ಕಾಮಿನೀ

ಸುರ ಸುಂದರ ಯಾಮಿನೀ

ಓ ಹಂಸ ಗಾಮಿನೀ

ನಿನಗೆ ನನ್ನ ಮನಸು ಸೂರೆಹೋಗಿದೆ.

ತಂಗಾಳಿ ಮಲ್ಲಿಗೆ ಬಾನಂಗಳ ರವಿತಾರಕೆ

ಕೂಗಿ ಕೂಗಿ ಹೇಳಿವೆ

ಇವಳು ನಿನ್ನ ಬಾಳ ಸಂಗಾತಿ

ಇವಳೆ ನಿನ್ನ ಸಂಗಾತಿ

ಎಂದೂ ಮಾಡಿವೆ ಬಲು ಶಿಫಾರಸು

ಏಕೊ ಮನದಿ ಒಂದು ದನಿ ಮತ್ತೆ ಮತ್ತೆ ಹೇಳುತಿದೆ

ನಿನಗೆ ಮುಂದೆ ಕಾದಿದೆ ಬೊಫಾರಸು

13

ಯಮಪುರಿಯಲ್ಲಿ ಯಂತ್ರೀಕರಣ

—ಆಭಾ

ಯಮಲೋಕದಲ್ಲಿ ಗಂಭೀರ ವಾತಾವರಣ. ಕಾರಣ-ಚಿತ್ರಗುಪ್ತನಿಗೆ ಕೈನೋವು ! ಪ್ರತಿಯೊಬ್ಬ ಹುಲು ಪ್ರಾಣಿಯ ಲೆಕ್ಕ ಬರೆದೂಬರೆದೂ ಅವನಿಗೆ ಕೈನೋವು ಬಂದಿತ್ತು. ಅಶ್ವಿನೀ ದೇವತೆಗಳು ಬಂದು ಪರೀಕ್ಷಿಸಿ, "ಇದಕ್ಕೇನೂ ಔಷಧವಿಲ್ಲ. ಒಂದು ವಾರ ಕೈಗೆ ರೆಸ್ಟ್ ಕೊಡಬೇಕು" ಎಂದು ಹೇಳಿ, ಚಿತ್ರಗುಪ್ತ ಮರುಪ್ರಶ್ನೆ ಹಾಕುವಷ್ಟರಲ್ಲೇ ಬೇರೊಂದು ಅರ್ಜೆಂಟ್ ಕೇಸಿದೆ ಎಂದು ಹೇಳಿ. ಅದೃಶ್ಯರಾಗಿದ್ದರು. ಒಂದು ವಾರ ಚಿತ್ರಗುಪ್ತ ಪುಸ್ತಕದಲ್ಲಿ entry ಮಾಡದಿದ್ದರೆ ಏನು ಗತಿ ? ಆದಾಗ್ಗ್ಯೂ ಯಮಲೋಕದಲ್ಲಿ ಆತಂಕ. ಕಳವಳ.

ಯಮಧರ್ಮರಾಜ, ಚಿತ್ರಗುಪ್ತರಾದಿ ಕೆಲವು ಆಪ್ತರೊಡನೆ, ತನ್ನ ಆಸ್ಥಾನದಲ್ಲಿ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ. ಆ ಸಮಯದಲ್ಲಿ ದೇವರ್ಷಿ ನಾರದರು ಆಗಮಿಸಿದರು.

"ನಾರಾಯಣ, ನಾರಾಯಣ ! ಯಮರಾಜ, ಏನಿದು ಈ ಗಂಭೀರ ವಾತಾವರಣ ? ಇತರರಿಗೆ ಚಿಂತೆಯನ್ನುಂಟು ಮಾಡುವ ನಿನ್ನ ಮುಖದಲ್ಲಿ ಕಳವಳದ ಸುಳಿಯೇಕೆ ? ಸದಾ ಲೆಕ್ಕ ಬರೆಯುವುದರಲ್ಲಿ ಲೀನವಾಗಿರುತ್ತಿದ್ದ ಚಿತ್ರಗುಪ್ತನೇಕೆ ಸುಮ್ಮನೆ ಕುಳಿತಿದ್ದಾನೆ ?" ಎಂದು ಪ್ರಶ್ನಿಸಿದರು.

"ಮುನಿವರ್ಯರೇ, ಸರಿಯಾದ ಸಮಯಕ್ಕೇ ಆಗಮಿಸಿರುವಿರಿ. ದಿಕ್ಕು ತೋಚದ ನಮಗೆ ದಾರಿ ತೋರಿಸಬೇಕು" ಎಂದು ಉದ್ಭವಿಸಿದ್ದ ಗಂಭೀರ ಸಮಸ್ಯೆಯನ್ನು ವಿವರಿಸಿದ ಯಮಧರ್ಮ.

"ಅಕಟಕಟಾ, ಏನಿದು ಮಾಯೆ ? ದೇವ ಸೃಷ್ಟಿಸಿದ ಮಾನವ, ಅಷ್ಟೊಂದು ಮುಂದುವರೆದಿರುವಾಗ, ಯಮಲೋಕದಲ್ಲಿ ಈ ಸಣ್ಣ ವಿಷಯಕ್ಕೆ ಅಷ್ಟೊಂದು ಚಿಂತೆಯೇ?" ನಾರದರ ಸಹಜ ಕೀಟಲೆ. ಯಮನಿಗೆ ಸ್ವಲ್ಪ ರೇಗಿತು. "ಚಿತ್ರಗುಪ್ತನ ಕೈ ನೋವು ಸಣ್ಣ ವಿಷಯವೇ ? ಅವನು ತನ್ನ ರೆಕಾರ್ಡ್ ಪ್ರತಿ ಕ್ಷಣವೂ ಬರೆಯು

ನಿದ್ದರೆ ಮಾನವ ಕುಲದಲ್ಲಿ ಏರುಪೇರಾಗುವುದಿಲ್ಲವೆ ? ಅದೂ ಅಲ್ಲದೆ ಆ ಹುಲು ಮಾನವನನ್ನು ಬಹಳವಾಗಿ ಹೊಗಳುತ್ತಿರುವಿರೇಕೆ ? ಎಂದು ಸ್ವಲ್ಪ ಖಾರವಾಗಿಯೇ ಕೇಳಿದ.

"ಹೇಳುವೆನು ಯಮರಾಜ, ಶಾಂತನಾಗಿ ಕೇಳು. ಏನೋ ಕೆಲಸದ ಮೇಲೆ ಪಾತಾಳಲೋಕಕ್ಕೆ ಹೋಗಿದ್ದೆ. ಹಿಂತಿರುಗುವಾಗ ಭೂಲೋಕದ ಮಾರ್ಗವಾಗಿಯೇ ಹಾದು ಬಂದೆ. ಆಹಾ, ಅದೇನು ಚಮತ್ಕಾರಗಳನ್ನು ಮಾಡಿದ್ದಾನೆ ಮಾನವ ! ನಿನ್ನ ಚಿತ್ರಗುಪ್ತನಂತೆ Ledger ಬರೆಯುತ್ತಾ ಕೈ ನೋಯಿಸಿಕೊಳ್ಳುವುದಿಲ್ಲ. ಈಗ ಭೂಲೋಕದಲ್ಲಿ. ಅಲ್ಲಿ ಲೆಖ್ಖ ಮತ್ತು ರೆಕಾರ್ಡ್ ಮಾಡಲು ಯಂತ್ರಗಳಿವೆ, ಗುಂಡಿಗಳನ್ನೊತ್ತಿದರೆ, ಹಿಂದೆ Store ಮಾಡಿದ್ದೆಲ್ಲಾ ಮತ್ತೆ ನೋಡಬಹುದು. ಈಗ ನಿನ್ನ ಸಮಸ್ಯೆಗೆ ಉಳಿದಿರುವ ಪರಿಹಾರ Computerisation ಒಂದೇ, ಚಿತ್ರಗುಪ್ತನ ದಫ್ತರದಲ್ಲೊಂದು ಕಂಪ್ಯೂಟರ್ ಹಾಕಿಸು. ಬೇಕಾದರೆ ಇದರ ಬಗ್ಗೆ Study ಮಾಡಲು ಇಬ್ಬರು ದೂತರನ್ನು ಭೂಲೋಕಕ್ಕೆ Depute ಮಾಡು ಇನ್ನಾದರೂ ಈ ಹಳೆಯ ಪದ್ಧತಿಗಳನ್ನೆಲ್ಲಾ ಬಿಟ್ಟು Progressive ಆಗು, ನಾನಿನ್ನು ಬರುತ್ತೇನೆ. ನಾರಾಯಣ, ನಾರಾಯಣ !" ಎಂದು ಹೊರಟುಬಿಟ್ಟರು.

ಯಮನು ತನ್ನ ಆಪ್ತರೊಡನೆ ಸಮಾಲೋಚನೆ ನಡೆಸಿ, Computer ಬಗ್ಗೆ Survey ಮಾಡಲು ನಾಲ್ಕು ಜನ ಯಮಕಿಂಕರರ Team ಅನ್ನು ಭೂಲೋಕಕ್ಕೆ, ಅದರಲ್ಲೂ ಪುರಾತನ ನಾಗರೀಕತೆಗೆ ಹೆಸರಾದ ಭಾರತಕ್ಕೆ, ಕಳುಹಿಸುವುದೆಂದು ತೀರ್ಮಾನಿಸಿದ. ಇದ್ದವರಲ್ಲಿ ಬುದ್ಧಿವಂತರೆನಿಸಿದ ನಾಲ್ಕು ಜನರನ್ನು ಆರಿಸಿ, IST ಪ್ರಕಾರ 9 ಗಂಟೆಯಿಂದ 17 ಗಂಟೆಯವರೆಗೆ Survey ನಡೆಸಿ, ಸಂಜೆ ಹಿಂತಿರುಗಿ Report submit ಮಾಡಬೇಕೆಂದು ಆದೇಶವನ್ನು ನೀಡಿದ.

ಕಿಂಕರರು ಭೂಲೋಕಕ್ಕೆ ಹೊರಟರು ; Of course, ಮಾನವ ವೇಷ ಧರಿಸಿ. ಆದೇಶಿಸಲ್ಪಟ್ಟಂತೆ ನಿರ್ದಿಷ್ಟ ಕಾಲಕ್ಕೆ ತಮ್ಮ Survey report ಅನ್ನು ತಂದೊಪ್ಪಿಸಿದರು.

ಅವರ Report ಅನ್ನು ಸಂಕ್ಷಿಪ್ತವಾಗಿ ಈ ಕೆಳಗೆ ನಮ್ಮ ಓದುಗರಿಗಾಗಿ ಕೊಟ್ಟಿದೆ—

ರಿಪ್ರೋರ್ಟ್

ಉತ್ತರ ದಿಕ್ಕಿನಿಂದ ಹೊರಟು ದಕ್ಷಿಣ ಭಾರತದ ಒಂದು ಊರಿನಲ್ಲಿ ಇಳಿದೆವು. "ಇದಾವ ಊರು? ಎಂದು ಕೇಳಿದಾಗ ಮಹನೀಯರೊಬ್ಬರು. "ಇದು ಬೆಂಗಳೂರು ಎಂದರು. "ಇಲ್ಲಿನ ವೈಶಿಷ್ಟ್ಯವೇನು, ಇದು ಯಾವುದಕ್ಕೆ ಪ್ರಸಿದ್ಧಿ ?" "ಇದನ್ನು Garden City ಹಾಗೂ Electronics City ಎನ್ನುತ್ತಾರೆ" ಎಂದು ಹೇಳಿ. ಒಂದು ಬಗೆಯ ವ್ಯಂಗ್ಯ ನಗೆ ಬೀರಿ ಹೊರಟುಹೋದರು. ನಾವುಗಳೂ, ಆಹಾ ಬಂದರೂ ಒಳ್ಳೆಯ ಸರಿಯಾದ ಊರಿಗೇ ಬಂದೆವಲ್ಲಾ ಎಂದು ಖುಷಿ ಪಟ್ಟು ಕೊಂಡು, ಅಲ್ಲಿಯ Computerised ಸಂಸ್ಥೆಗಳಿಗೆಲ್ಲಾ ಭೇಟಿ ನೀಡಿದೆವು,

ಮೊದಲನೆಯ ಸಂಸ್ಥೆ—Computerಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ, Computer ತೋರಿಸುವಿರಾ ಎಂದು ಕೇಳಿದ್ದಕ್ಕೆ "ಅದಕ್ಕೇನು, ಅಗತ್ಯವಾಗಿ" ಎಂದು ಕರೆದುಕೊಂಡು ಹೋಗಿ ಭಾರಿಯಾದ ಯಂತ್ರವನ್ನು ತೋರಿಸಿದರು. "ಇದನ್ನು ಇಲ್ಲೇ ತಯಾರಿಸಿದಿರಾ ?" ಎಂದು ಪ್ರಶ್ನಿಸಿದೆವು. "ಇಲ್ಲ, ಇಲ್ಲ, ಇದು ಹೈಟೆಕ್. Import ಮಾಡಿದೆವು" ಎಂದರು, "ಇದು ಹೇಗೆ ಕೆಲಸ ಮಾಡುತ್ತದೆಂಬುದನ್ನು ತೋರಿಸುವಿರಾ ? ನಮಗೂ ಇಂತಹದೊಂದು ಬೇಕು" ಎಂದು ಕೇಳಿಕೊಂಡೆವು. "Sorry, not possible. ಸ್ವಲ್ಪ ಕೆಟ್ಟು ಹೋಗಿದೆ. Foreign ನಿಂದ Technicians ಬರುವುದಕ್ಕೆ ಮೂರು ತಿಂಗಳಿಂದ Wait ಮಾಡುತ್ತಿದ್ದೇವೆ" ಎಂದರು. Thanks ಹೇಳಿ ಹೊರಟಿದ್ದೆವು.

ಎರಡನೆಯದು ದೊಡ್ಡ ಕಂಪನಿ. ಒಳಗೆ ಹೋದರೆ. ಸ್ವಲ್ಪ ಕತ್ತಲು ಕತ್ತಲಾಗಿತ್ತು. Computerಗೆ ಸಂಬಂಧಿಸಿದ ಅಧಿಕಾರಿಗಳನ್ನು ಅದು ಹೇಗೆ ಕೆಲಸ ಮಾಡುತ್ತದೆಂದು ತೋರಿಸುವಿರಾ ಎಂದು ಕೇಳಿದ್ದಕ್ಕೆ "Sorry,not possible" ಎಂಬ ಉತ್ತರವೇ ಬಂತು. "ಏಕೆ ಕೆಟ್ಟು ಹೋಗಿದೆಯೋ ?" ಎಂದು ಕೇಳಿದೆವು. "ಛೇ. ನೋಡಿದರೆ ತಿಳಿಯುವುದಿಲ್ಲವೆ ? Current ಇಲ್ಲ, Transformer burst ಆಗಿ, ಬೆಳಗಿನಿಂದ ನಮಗೆ Power supply ಇಲ್ಲ" ಎಂದರು. Thank ಮಾಡಿ ಹೊರಟೆವು.

ಮೂರನೆಯದು ಒಂದು ದೊಡ್ಡ Bank. ನೋಡುವುದಕ್ಕೆ ಅಂದವಾಗಿತ್ತು. Power supply ಇದ್ದದ್ದೂ ಕಾಣುತ್ತಿತ್ತು. Computer Department-in-charge, ಅದನ್ನು install ಮಾಡಿದ್ದ. Air conditioned

hallಗೆ ಕರೆದುಕೊಂಡು ಹೋದರು. Computer ನಡೆಸಲು ಸುಮಾರು ಹತ್ತು-ಹನ್ನೆರಡು ಮಂದಿ ಲಲನಾಮಣಿಗಳೇ ಇದ್ದರು. "Computer ಅನ್ನು ಚಾಲನೆ ಮಾಡುತ್ತಾ, ನಿಮಗೆ ವಿವರಿಸುತ್ತೇನೆ" ಎನ್ನುತ್ತಾ ಒಂದು ಗುಂಡಿ ಒತ್ತಿದರು. ಪ್ರತೀಕ್ಷೆಯಲ್ಲಿದ್ದ ನಮಗೆ ಏನೂ ವ್ಯತ್ಯಾಸ ಗೊತ್ತಾಗಲಿಲ್ಲ. ಅಧಿಕಾರಿ "ಥತ್ತೇರಿ ! Sorry. ಸಮಯಕ್ಕೆ ಸರಿಯಾಗಿ Power shut down ಆಗಿದೆ" ಎಂದರು. "ಏಕೆ Transformer ಕೆಟ್ಟು ಹೋಯಿತೆ ? ಎಂದು ಕೇಳಿದ್ದಕ್ಕೆ, "ಇಲ್ಲ. Load shedding. ಮತ್ತೊಮ್ಮೆ ಬನ್ನಿ, ತೋರಿಸುತ್ತೇನೆ" ಎಂದರು. ಅಷ್ಟರಲ್ಲಿ ಅಲ್ಲಿದ್ದ ಹೆಣ್ಮಣಿಗಳು. "ಸರ್, ನಾವಿನ್ನು ಮನೆಗೆ ಹೋಗುತ್ತೇವೆ.. ನಾಳೆ ಬೆಳಿಗ್ಗೆ Complete ಮಾಡುತ್ತೇವೆ. ಬೈ" ಎಂದು ಹೇಳಿ, ಕಿಲಕಿಲನೆ ನಗುತ್ತಾ ಹೊರಟು ಹೋದರು. ಅಧಿಕಾರಿಗಳು ನಿಟ್ಟುಸಿರು ಬಿಡುತ್ತಾ, ಆ Ledger ಬರೆಯುತ್ತಿದ್ದ ದಿನಗಳು ಎಷ್ಟು ಚೆನ್ನಾಗಿದ್ದವು ! ಅಂದಿನ ಕೆಲಸ ಅಂದಿಗೆ ಮುಗಿಯುತ್ತಿತ್ತು. ಜಾನೇ ಕಹಾಂ ಗಯೇ ವೊ ದಿನ್'...ಎಂದು ಗುನುಗಿದರು. ಅವರಿಗೆ Thank ಮಾಡಿ ಕೈಕುಲುಕಿ ಹೊರಬಿದ್ದೆವು.

ಮುಂದಿನ Company ಯಲ್ಲಿಯೂ Power ಇರಲಿಲ್ಲ. ಅಲ್ಲಿನ ಅಧಿಕಾರಿಯನ್ನು ಕೇಳಿಯೇ ಬಿಟ್ಟೆವು, "ಇಷ್ಟೊಂದು Power problem ಇರುವಾಗ, ಅದಕ್ಕೆ ಏನಾದರೂ Substitute ಇಲ್ಲವೇ?" ಎಂದು. "ಏಕಿಲ್ಲ ? ನಮ್ಮಲ್ಲಿ Generators ಇವೆ. ಅದರ ಸಹಾಯದಿಂದ ಯಾವ ಯಂತ್ರವನ್ನಾದರೂ ನಡೆಸಬಹುದು ಎಂದರು. ನಾವು ಉತ್ಸಾಹದಿಂದ "ಹಾಗಾದರೆ ನೋಡಬಹುದೇ? ಎಂದೆವು. Sorry, N.P. Generator ನಡೆಸಲು ಒಂದು ತೊಟ್ಟು Diesel ಸಹ ಇಲ್ಲ. ಪೆಟ್ರೋಲಿಯಂ ಕಂಪೆನಿಗಳ Strike ನಿಂದಾಗಿ ಎರಡು ದಿನಗಳಿಂದ ನಗರದಲ್ಲಿ Petrol ಮತ್ತು Diesel ನ Shortage ಆಗಿದೆ." ನಿರಾಶೆಯಿಂದ ಆಚೆ ಬಂದೆವು.

ಕೊನೆಗೆ computer ಗಳನ್ನು ತಯಾರಿಸುವ Company ಗೇ ಹೋಗಿ ಬಿಟ್ಟೆವು. ಅವರು ನಮ್ಮನ್ನು ಆದರದಿಂದ ಬರಮಾಡಿಕೊಂಡು, ಅದರ ಬಗ್ಗೆ ವಿವರಿಸಿ, ಅದು ಕೆಲಸ ಮಾಡುವುದನ್ನೂ ತೋರಿಸಿದರು. ನಾರದರು ಹೇಳಿದಂತೆ ಅತ್ಯಂತ ಉಪಕಾರಿ ಯಂತ್ರ "ಇಂತಹುದು ಒಂದನ್ನು ನಾವೂ ತೆಗೆದುಕೊಂಡು ಹೋಗಬೇಕೆಂದಿದ್ದೇವೆ. ಅದರ Procedure ಏನು ? ಎಂದು ಕೇಳಿದೆವು. "ಸಂತೋಷ, ನಿಮ್ಮ Address ಕೊಡಿ, ಇವಕ್ಕೆ Quotation ಕೊಡುತ್ತೇವೆ

ಮತ್ತು ಇದರ Transportation ಬಗ್ಗೆಯೂ ಹೇಳುತ್ತೇವೆ." Address ಕೊಟ್ಟೆವು–ಚಿತ್ರಗುಪ್ತ C/o ಯಮಧರ್ಮರಾಜ, ಯಮಪುರಿ_ಎಂದು. "ಇದು ಭಾರತದ ಯಾವ State ನಲ್ಲಿದೆ ? ನಮಗೆ ಗೊತ್ತೇ ಇಲ್ಲವಲ್ಲ·" ಭಾರತದಲ್ಲಿಲ್ಲ, ಬೇರೆ ಲೋಕದಲ್ಲಿದೆ ಎಂದುತ್ತರಿಸಿದೆವು. "ನೀವು ಬಹಳ ತಮಾಷೆಯಾಗಿ ಮಾತನಾಡುತ್ತೀರಿ. ಅಂದ ಹಾಗೆ ನಿಮಗೆ Import licence ಇದೆಯೇ ? ಎಂದು ಸ್ವಲ್ಪ ಆಶ್ಚರ್ಯದಿಂದ ಕೇಳಿದರು. ನಾವುಗಳು ಇಲ್ಲ" ಎಂದು ಹೇಳಿ, ಏನೂ ಅರ್ಥವಾಗದ್ದರಿಂದ ಆಚೆ ಬಂದೆವು.

ಅಷ್ಟು ಹೊತ್ತಿಗೆ ನಮ್ಮ ಕಾಲಾವಧಿ ಮುಗಿದಿತ್ತು. ವಾಪಸ್ಸು ಬರುತ್ತಿರುವಾಗ, BTS ಬಸ್ಸಿಗಾಗಿ ಕಾಯುತ್ತಿದ್ದ ಮಹನೀಯರೊಬ್ಬರನ್ನು ಈ ಊರಿಗೆ Electronics city ಎಂದೇಕೆ ಹೆಸರು ಬಂದಿದೆ ?, ಎಂದು ಕೇಳಿದ್ದಕ್ಕವರು. "ಯಾರು ಹೇಳಿದರ್ರೀ ಹಾಗಂತ ? ಈ ಊರಿನ ಹೆಸರು 'ಬೆಂದಕಾಳೂರು' ಅಂತ ಎಂದು ಹೇಳಿ, ಭರ್ರೆಂದು ಬಂದ BTS ಬಸ್ಸಿನ Barಗೆ ನೇತಾಡುತ್ತಾ ಹೊರಟು ಹೋದರು.

ವಾಪಸ್ಸು ಬರಬೇಕೆಂದು ತಲೆ ಎತ್ತಿ ನೋಡಿದಾಗ ಅಲ್ಲೊಂದು ದೊಡ್ಡ Hoarding ಕಾಣಿಸಿತು Kill pain balm ಎಂಬುದರದು. ಹತ್ತಿರ ಇದ್ದ ಒಂದು ಔಷಧಿ ಅಂಗಡಿಯಿಂದ ಅದರ ಒಂದು Sample bottle ಅನ್ನು ಚಿತ್ರಗುಪ್ತರಿಗಾಗಿ ತೆಗೆದುಕೊಂಡೆವು.

Survey ಮಾಡಿದ ನಮ್ಮ ಸಲಹೆ_Computer ಅತ್ಯಂತ ಉಪಯೋಗಕಾರಿ. ಅದನ್ನು ಚಾಲೂ ಮಾಡಲು Power supply ಅತ್ಯಗತ್ಯ. ಅದರ ಸರಬರಾಜು ನಿಶ್ಚಿತಗೊಳಿಸಿಕೊಂಡು, Computer install ಮಾಡಬಹುದು, ಅದಕ್ಕೆ ನಮಗೆ ಇನ್ನೂ ಬಹಳ ವೇಳೆ ಹಿಡಿಯಬಹುದು. ಆದ್ದರಿಂದ ನಮ್ಮ ಲೋಕದಿಂದ ಅಥವಾ ದೇವಲೋಕದಿಂದ ಕೆಲವು ಕನ್ನಿಕೆಯರನ್ನು ಆ ನಗರದಲ್ಲಿ, ಹಾದಿಗೆರಡು ಮೂಲೆಗೊಂದು ಇರುವ Computer schoolಗಳಿಗೆ Training ಗಾಗಿ ಕಳಿಸಬಹುದು.

ಈ ರಿಪೋರ್ಟ್ ಓದಿ, ಚಿತ್ರಗುಪ್ತ, ಅವರು ತಂದ Kill pain balm ಅನ್ನು ಭುಜದಿಂದ ಬೆರಳು ತುದಿಯವರೆಗೆ ಹಚ್ಚಿಕೊಂಡು, ಯಥಾಪ್ರಕಾರ ತನ್ನ Ledger ನೆದುರು ಕೂತು, ಅ ಅಕ್ಷರವಡಿಯಲ್ಲಿ 'ಅಭಾ' ಪುಟ ತೆಗೆದು ಬರೆಯಲು ತೊಡಗಿದ್ದ.



"ತಕಾಯಿತ್ರು ನಿನ್ನ ಬೀಟ್ನಾಗೆ ಬರ್ದೆ ಇರ್ಲಿ ಅಂತ ಅರ್ಕೈಪೊತ್ಕಂಡಿವ್ನಿ.
ಎದ್ರಿಕೆ ಇಟ್ದಿ ಓಗ್ಬಾ ! "

ಪ್ರಾತಃಕಾಲ !

— ವಿಕಟಕವಿ

ಇಂತಹ ಸುಂದರ ಪ್ರಾತಃಕಾಲದಿ
ಮಸಾಲೆಗಿಂತಲೂ ಬೇರೆಯು ರುಚಿಯುದು
ಜಿಹ್ವೆಗೆ ಬೇಕಿಲ್ಲ !
ತಿಳಿಗೆಂಪಿನ ಚಟ್ನಿಯು ಲೇಪವು
ಇದ್ದರೆ ಸಗ್ಗಕೆ ಮಿತಿಯಿಲ್ಲ !! ೧

ಬೆಳಗಿನ ಚಳಿಯಲಿ ನಡುಗುತ ಬಂದು
ಹೋಟಲ ಒಳಗಡೆ ಬೆಚ್ಚನೆ ಕುಂದು,
ಕಾಯುವುದೇ ಕೈಲಾಸ !
ಒಳಗಿಂ ಬರುತಿಹ ಚೊಂಯನೆ ಸದ್ದೇ
ಕಿವಿಗಳಿಗುಲ್ಲಾಸ !! ೨

ಇಡಲಿ, ವಡೆಗಳು ಹೇರಳವಾಗಿವೆ
ಖಾರಾಭಾತದ್ದೇ ಕಂಪನು ಸೂಸಿದೆ
ಗರಿಗರಿ ಪೂರಿಯಿದೆ
ಇಂತಿದ್ದರೆ ಬೆಣ್ಣೆ ಮಸಾಲೆಪ ಮೋಹವು
ಭಕ್ತನ ಕಾಡುತಿದೆ !! ೩

ಬಿಸಿ ಬಿಸಿ ದೋಸೆಯ ಮಾಯಾ ಬಂಧ
ಮೆಲ್ಲನೆ ಮೆಲ್ಲುವುದೇ ಆನಂದ !
ಕಾಫಿಯು ಕುಡಿದು ಹೊರಬರುತಿರಲು
ಮಸಾಲೆಗಿಂತಲು ರಸಜೀವಿಗೆ
ಬೇರೆಯು ನೆನಪಿಲ್ಲ !! ೪

(ಕುವೆಂಪು ಅವರ ಕ್ಷಮೆ ಬೇಡಿ......)

ಜನಪ್ರಿಯ ವಿಜ್ಞಾನ— ಪಠ್ಯ ಪುಸ್ತಕಗಳು

—ಶಿವು

ಜಪಾನಿನ ವಿಜ್ಞಾನಿಯೊಬ್ಬನಿಗೆ ನೊಬೆಲ್ ಪಾರಿತೋಷಕ ದೊರಕಿತು ಎಂಬ ಸುದ್ದಿ ಆಗಿಂದಾಗ್ಗೆ ಕೇಳಿಬರುತ್ತದೆ. ಜಪಾನಿಗಿಂತ ಅನೇಕ ಪಟ್ಟು ದೊಡ್ಡದಾದ ಭಾರತದ ವಿಜ್ಞಾನಿಗಳಿಗೇಕೆ ಈ ಬಹುಮಾನ ದೊರಕುತ್ತಿಲ್ಲ ? ಈ ಬಗ್ಗೆ ಆಳವಾಗಿ ಸಂಶೋಧನೆ ಮಾಡಿರುವ ಖ್ಯಾತ ಸಮಾಜ ವಿಜ್ಞಾನಿ ಡಾ॥ ಮದನರಾಜ್ ಅವರ ಪ್ರಕಾರ ಭಾರತದ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ವಿಷಯಗಳ ಬಗ್ಗೆ ಆಸಕ್ತಿ ದಿನೇ ದಿನೇ ಕುಂದುತ್ತಿದೆ. ಯುವ ಪೀಳಿಗೆಯ ಗಮನವೆಲ್ಲಾ ಅಶ್ಲೀಲ ಕಾದಂಬರಿಗಳು ಹಾಗೂ ಸಿನಿಮಾಗಳ ಕಡೆ ಹರಿದಿರುವುದರಿಂದ, ಉತ್ತಮ ಗುಣಮಟ್ಟದ ವಿಜ್ಞಾನಿಗಳು ಹೊರಬರುತ್ತಿಲ್ಲ. ಇದಕ್ಕೆ ಪರಿಹಾರ ? "ಇದೆ" ಎನ್ನುತ್ತಾರೆ ಡಾ॥ ಮದನ ರಾಜ್. ವೈಜ್ಞಾನಿಕ ವಿಷಯಗಳ ಬಗ್ಗೆ ಆಸಕ್ತಿ ಮೂಡುವ ರೀತಿಯಲ್ಲಿ ಪಠ್ಯ ಪುಸ್ತಕಗಳನ್ನು ರಚಿಸಿದರೆ, ವಿದ್ಯಾರ್ಥಿಗಳ ಒಲವನ್ನು ಬಹು ಸುಲಭವಾಗಿ ವಿಜ್ಞಾನದ ಕಡೆ ಹೊರಳಿಸಿ, ಕೇವಲ ಹಲವೇ ವರ್ಷಗಳಲ್ಲಿ ಡಜ಼ನ್‌ಗಟ್ಟಲೆ ನೊಬೆಲ್ ಬಹುಮಾನಗಳನ್ನು ಭಾರತದೆಡೆ ಬರುವಂತೆ ಮಾಡಬಹುದು ಎಂಬುದು ಡಾ॥ ರಾಜ್ ಅವರ ಅನಿಸಿಕೆ. ಈ ಬಗ್ಗೆ ಅವರು ಹಲವು ಮಾಡೆಲ್ ಪುಸ್ತಕಗಳನ್ನು ರಚಿಸಿದ್ದು. ಓದುಗರ ಅವಗಾಹನೆಗಾಗಿ ಹಲವು ಸ್ಯಾಂಪಲ್ ಪುಟಗಳನ್ನು ಇಲ್ಲಿ ಉಲ್ಲೇಖಿಸಿದ್ದೇವೆ.

ಭೌತಶಾಸ್ತ್ರ

ಪುಟ 88

"ಸರಪಳಿ ಕ್ರಿಯೆ ಎಂದರೇನು ಸಾರ್ ?"

ಸುಚಿತ್ರಾ ಮೆಲುನಗೆ ಬೀರುತ್ತಾ ಕತ್ತು ಕೊಂಕಿಸಿ ಕೇಳಿದಳು.

ಒಮ್ಮೆಲೇ ಡಾ॥ ರವಿಗೆ ಬಹುವಾಗಿ ಸೆಖೆಯಾದಂತೆ ಭಾಸವಾಯಿತು. ಸುಚಿತ್ರಾ ಅವರ ಆಪ್ತ ವಿದ್ಯಾರ್ಥಿನಿ.

"ಮತ್ತೆ ಸಾರ್ ! ಸಾರ್ ! ನಿನ್ನಿಂದ ರವಿ ಅಂತ ಕರೆಸಿಕೊಳ್ಳೋದಕ್ಕೆ ನನ್ನ ಹಣೆಯಲ್ಲೇ ಬರೆದಿಲ್ಲಾ ಅಂತ ಕಾಣುತ್ತೆ. ಹೋಗಲಿ, ಸರಪಳಿ ಕ್ರಿಯೆ ಬಹಳ ಸುಲಭ ಸುಚಿ. ಒಂದು ಅಣು ಇನ್ನೊಂದು ಅಣುವಿಗೆ ಢಿಕ್ಕಿ ಹೊಡೆದರೆ. ಆ ಇನ್ನೊಂದು ಅಣು ಎರಡು ಚೂರಾಗುತ್ತೆ. ಆ ಎರಡು ಚೂರುಗಳು ಮತ್ತೆ ಇನ್ನೆರಡು ಅಣುಗಳಿಗೆ ಢಿಕ್ಕಿ ಹೊಡೆದು..."

"ಸ್ವಲ್ಪ ತಾಳಿ ಸಾ...ಸಾರಿ...ರವಿ, ನೀವು ಹೇಳೋದು ನನಗೆ ಅರ್ಥಆಗ್ತಾ ಇಲ್ಲ. ಸ್ವಲ್ಪ ವಿವರವಾಗಿ..."

ಮಂದವಾಗಿ ಬೀಸುತ್ತಿದ್ದ ತಂಗಾಳಿಗೆ ಸುಚಿತ್ರಾಳ ಮುಂಗುರುಳು ಹಾರಾಡುತ್ತಿದ್ದವು. ಅದನ್ನೇ ದಿಟ್ಟಿಸುತ್ತಾ ಡಾ॥ ರವಿ ಹೇಳಿದರು.

"ಒಂದು ಉದಾಹರಣೆ ಹೇಳ್ತೀನಿ, ಇವತ್ತು ನಾವಿಬ್ಬರೂ ಕೂಡಿ ರೆಕ್ಸ್ ಥೇಟರಿಗೆ ಸಿನಿಮಾ ನೋಡಲು ಹೋದೆವು ಅಂತ ಭಾವಿಸು. ಅಲ್ಲಿ ನಿನ್ನ ಸ್ನೇಹಿತೆ ಚಂಪಾ ನಮ್ಮನ್ನ ನೋಡಿಬಿಡ್ತಾಳೆ. ಅವಳು ಓಡಿ ಹೋಗಿ ಸ್ಮಿತಾ ಮತ್ತು ಉಷಾ ಇಬ್ಬರಿಗೂ ಈ ಸುದ್ದೀನ ತಿಳಿಸ್ತಾಳೆ. ಸ್ಮಿತಾ ಕೂಡಲೇ ಬೆಟ್ಸಿ ಮತ್ತು ರೋಷನ್ ಅವರಿಗೆ ತಿಳಿಸೋದ್ದು ಖಂಡಿತ. ಉಷಾ ಸಹಾ ತನ್ನ ಹಾಸ್ಟೆಲ್ ಸ್ನೇಹಿತೆಯರಾದ ರೇಣು ಮತ್ತು ಭವ್ಯ ಅವರಿಗೆ ತಿಳಿಸೇ ತಿಳಿಸುತ್ತಾಳೆ. ಹೀಗೆ ಅರ್ಧ ಘಂಟೆ ಸಮಯದಲ್ಲಿ ನಾವಿಬ್ಬರೂ ಸಿನಿಮಾಕ್ಕೆ ಹೋದ ಸುದ್ದಿ ಕಾಲೇಜಿನಲ್ಲೆಲ್ಲಾ ಹರಡಿಬಿಡುತ್ತೆ, ಇದೇ ಸರಪಳಿ ಕ್ರಿಯೆ. ಈಗ ಅರ್ಥ ಆಯ್ತಾ ಸುಚಿ ? "

ಡಾ॥ ರವಿಯ ದನಿಯಲ್ಲಿ ಒಂದು ತೆರನಾದ ಮಾರ್ದವತೆ ಇತ್ತು. ಸುಚಿತ್ರ ತದೇಕಚಿತ್ತದಿಂದ ರವಿಯ ಬೊಗಸೆಗಣ್ಣುಗಳನ್ನೇ ನೋಡುತ್ತಿದ್ದಳು.

"ಚೆನ್ನಾಗಿ ಅರ್ಥ ಆಯ್ತು, ರವಿ. ಆದರೆ ಒಂದೇ ಒಂದು ಪ್ರಶ್ನೆ..."

"ಕೇಳು ಸುಚಿ, ಕೇಳು" ಕಾತರದಿಂದ ರವಿ ಕೇಳಿದ.

"ರೆಕ್ಸ್ ಥೇಟರಿನಲ್ಲಿ ಯಾವ ಸಿನಿಮಾ ನಡೀತಿದೆ ?"

ರಸಾಯನ ಶಾಸ್ತ್ರ

ಪುಟ 57

ಗುಂಡನೆಯ ತಳದ ಗಾಜಿನ ಬುರುಡೆಯಲ್ಲಿ ತಾಮ್ರದ ಸುರುಳಿಗಳು ಬೆಚ್ಚಗೆ ಕುಳಿತಿದ್ದವು. ಬುರುಡೆಯನ್ನು ಸುಧಾ ತನ್ನ ಕೋಮಲವಾದ ಕೈಗಳಿಂದ ಎತ್ತಿ

ಆಧಾರಸ್ತಂಭಕ್ಕೆ ಬಿಗಿಪಡಿಸಿದ್ದಳು. ಸುಧಾಳ ಸಹಪಾಠಿ ಪ್ರವೀಣ್ ಹೈಡ್ರೊ ಕ್ಲೋರಿಕ್ ಆಮ್ಲದ ಜಾಡಿಯನ್ನು ಬಲಗೈಲಿ ಹಿಡಿದು ಮೆಲ್ಲಗೆ ಗಾಜಿನ ಬುರುಡೆಗೆ ಆಮ್ಲವನ್ನು ಬಗ್ಗಿಸಿದ. ಅವನ ಷರ್ಟಿನ ಬಲಗೈ ತೋಳು ಮಡಿಚಿತ್ತು. ಸುಧಾಳ ಕಣ್ಣುಗಳು ಪ್ರವೀಣನ ಮುಂಗೈ ಮೇಲಿದ್ದ ಕಪ್ಪು ಗುಂಗುರು ಕೂದಲುಗಳನ್ನು ದೃಷ್ಟಿಸಿದ್ದವು. ಅವಳ ಮನಸ್ಸು ಕನಸಿನ ಲೋಕದಲ್ಲೆಲ್ಲೋ ವಿಹರಿಸುತ್ತಿತ್ತು.

"ಸುಧಾ, ಗಾಜಿನ ಬುರುಡೆಗೆ ಕೊಳವೆ ಜೋಡಿಸಬೇಕು". ಪ್ರವೀಣನ ಗಂಡು ದನಿ ಸುಧಾಳನ್ನು ಭೂಲೋಕಕ್ಕೆ ಎಳೆದುತಂದಿತ್ತು.

"ಆಗಲಿ ಪ್ರವೀಣ್, ನಿನ್ನ ಆಜ್ಞೆಯನ್ನು ನಾನು ಎಂದಿಗೂ ಮೀರುವುದಿಲ್ಲ". ಸುಧಾ ಯಾಂತ್ರಿಕವಾಗಿ ಗಾಜಿನ ಕೊಳವೆ ಹಾಗೂ ಅನಿಲ ಶೇಖರಣೆ ಜಾಡಿಗಳನ್ನು ಜೋಡಿಸಿ, ತನ್ನ ನೀಳವಾದ ತೋಳಿನಿಂದ ದೂರದಲ್ಲಿದ್ದ ಬುನ್‌ಸೆನ್ ಬರ್ನರ್‌ಅನ್ನು ಎಳೆದು ಬುರುಡೆಯ ಕೆಳಗಿಟ್ಟಳು. ಸುಧಾಳ ಎದೆಯ ತುಡಿತಕ್ಕೆ ಸಮವಾಗಿ ತಾಳ ಹಾಕುವಂತೆ ಆಮ್ಲ ಕುದಿಯಹತ್ತಿತ್ತು. ಜಾಡಿಯಲ್ಲಿ ಅನಿಲ ನಿಧಾನವಾಗಿ ತುಂಬುತ್ತಾ ಬಂತು.

"ಸುಧಾ, ಇದೇನು ಕಣ್ಣೀರು ? ನಿನ್ನ ಮನದಳಲನ್ನು ಖಂಡಿತ ಹೇಳು. ನನ್ನಾಣೆ. ಅದೇನಿದ್ದರೂ ನಾನು ಪರಿಹರಿಸುತ್ತೇನೆ" ಪ್ರವೀಣನ ದನಿಯಲ್ಲಿ ಆವೇಶವಿತ್ತು.

ಸುಧಾ ಒಮ್ಮೆಲೇ ಕಿಲಕಿಲನೆ ನಕ್ಕಳು.

"ಥೂ, ಹೋಗು ಹುಚ್ಚ, ಗಂಧಕದ ಡೈ ಆಕ್ಸೈಡ್ ಘಾಟಿನ ಅನಿಲ ಅಂತ ತಿಳಿಯದೇ ನಿನಗೆ ? ಘಾಟಿನಿಂದಾಗಿ ಕಣ್ಣೀರು ಬಂತು. ಆದರೂ ನನ್ನ ಮನದಳಲನ್ನು..."


''ರೇಖಾ'' ಗಣಿತ

ಪುಟ 68

"ಮಿಸ್ ರೇಖಾ, ಮಿಸ್ ರೇಖಾ, ನೀವು ವೃತ್ತದ ಕೇಂದ್ರ ಬಿಂದು. ನಾನು ಪರಿಧಿ, ನಿಮ್ಮ ಭೇಟಿಗಾಗಿ ಅನೇಕ ದಿನಗಳಿಂದ ಹಾತೊರೆಯುತ್ತಿದ್ದೇನೆ. ಪರಿಧಿಯಿಂದ ಕೇಂದ್ರ ಬಿಂದುವಿಗೆ ಬರಲು ಒಂದು ತ್ರಿಜ್ಯ ಸಿಕ್ಕಿಲ್ಲ. ನನ್ನ ಕನಸಿನಲ್ಲೆಲ್ಲಾ

ನೀವು ಕಲಿಸಿದ "ರೇಖಾ" ಗಣಿತದ ಪಾಠಗಳೇ. ಆಹಾ ಎಂತಹ ಸುಂದರ ವಕ್ರ ರೇಖೆಗಳು!".

"ಓಹ್, ಇದು ನನ್ನ ಅತ್ಯಂತ ಸಂತಸದ ದಿನ ಮಿ॥ ಚತುರ್ಭುಜ, ನೀವು ಯಾವಾಗ ಧೈರ್ಯ ತಾಳಿ ನನ್ನನ್ನು ಮಾತನಾಡಿಸುತ್ತೀರೋ ಎಂದು ಕಾಯುತ್ತಿದ್ದೆ. ನಿಜವಾಗಿಯೂ ನಾನು ನಿಮ್ಮನ್ನು ಬಹುವಾಗಿ ಪ್ರೇಮಿಸುತ್ತೇನೆ. ಒಂದು ಸಮಕೋಣ ತ್ರಿಭುಜದ ಕರ್ಣದ ಮೇಲಿನ ವರ್ಗ ಎಲ್ಲಿಯವರೆಗೆ ಇತರ ಎರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮನಾಗಿರುತ್ತದೋ, ಅಲ್ಲಿಯವರೆಗೆ ನನ್ನ ಪ್ರೇಮ ಶಾಶ್ವತ. ಪೈಥಾಗೊರಾಸನಾಣೆ !"



"ಈ ಸಲಾನಾದ್ರೂ ನಮ್ಮಕ್ಕ Vote ಮಾಡಬಹುದು. ಕಳೆದ ಐದು ವರ್ಷಗಳಿಂದ ಅವಳ ವಯಸ್ಸು 18ರ ಮೇಲೆ ಏರೇ ಇಲ್ಲ".

ನಂ ಕ್ಲಬ್ಬಿನಲ್ಲಿ

(ಮಳೆ ! ಮಳೆ !!)

— ಆನಂದ್

"ಅಂತೂ ಸ್ವರ್ಗದಲ್ಲೂ ವಿಧಾನಸೌಧದ ತರಹಾನೇ" ಅಂದ ರಾಮು. ನಾವೆಲ್ಲ ಬೆರಗಾದೆವು. 'ಏನೋ ಹಾಗಂದ್ರೆ' ಅಂದೆ. "ನೋಡು ಮರಿ. ಎರಡು ವರ್ಷದ ಹಿಂದೆ ಮಳೆ ಬರಲೀ ಅಂತ ಯೋಗಿಗಳೆಲ್ಲ ಯಜ್ಞ, ಪ್ರಾರ್ಥನೆ ಮಾಡಿದರಲ್ಲ! ಆ ಅಪ್ಲಿಕೇಷನ್ ಎಲ್ಲ ಆಫೀಸ್‌ಗಳಿಗೂ ಹೋಗಿ, ಕೊನೆಗೆ ಮಳೆ ಗ್ರ್ಯಾಂಟ್ ಆಗಿ ಈ ವರ್ಷ ಧಾರಾಕಾರವಾಗಿ ಮಳೆ ಬರ್‍ತಿದೆ ! ಅಂದ್ರೆ ಸ್ವರ್ಗದಲ್ಲೂ ವಿಧಾನಸೌಧ ಇದೆ ಅಂತಾಯ್ತು !"

ನನ್ನ ಫ್ರೆಂಡ್ ಥಾಮಸ್ ಹಲ್ಲು ಕಿರೀತಾ ಕೂತಿದ್ದ ! ಏನೋ, ಮಳೆ ಹಾವಳಿ ಅಂತ ಎಲ್ಲ ಒದ್ದಾಡ್ತಿದಾರೆ, ನೀ ಮಾತ್ರ ನಗ್ತಿದೀಯ ಅಂದೆ. ಅಲ್ಲೇ ಇರೋದು ನೋಡು ತಮಾಷೆ! ಕೆಲವು ಹಳೇ ಫೈಲುಗಳಿಂದ ವರಮಾನ ತೆರಿಗೆ ಯವರ ಹತ್ರ ಗೊಂದಲ ಆಗೋದ್ರಲ್ಲಿತ್ತು ! ಈಗ ಬೇಸ್‌ಮೆಂಟ್‌ನಲ್ಲಿದ್ದ ಕಾಗದ ಪತ್ರ ಎಲ್ಲ ವರುಣ ದೇವನ ಪಾಲು ! ಹೊಸದಾಗಿ ಎಲ್ಲ ಫ್ರೆಷ್ ಆಗಿ ಅಕೌಂಟ್ ಇಡಿ ಅಂತ ಹೇಳಿದಾರೆ ಅಧಿಕಾರಿಗಳು !" ಅವನ ಖರ್ಚಿನಲ್ಲೇ ಸ್ವೀಟು ಸಿಕ್ಕಿತು !.

ಗೋಪೀನಾಥ ಬಂದ ಕ್ಲಬ್ಬಿಗೆ. ಏನೋ ವಿಶೇಷ ನಿಂ ಸ್ಕೂಲಿನಲ್ಲಿ ಅಂದೆ. ಗೋಪಿ ಹೈಸ್ಕೂಲ್ ಹೆಡ್‌ಮಾಸ್ಟರ್. ನಕ್ಕ. "ಅಲ್ಲ ಕಣೋ, ನಂ ಹುಡುಗ ಒಬ್ಬ ಚೂಟಿ, ಸಾರ್ ಬೆಂಗಳೂರನ್ನ ದಕ್ಷಿಣದ ಚಿರಾಪುಂಜಿ ಅಂತ ಕರೀತಾರಾ ಸಾರ್ ಅಂತ ಕೇಳಿದ ! ಉತ್ರ ಏನು ಅಂತ ಗೊತ್ತಾಗಿಲ್ಲ !" ಅಂದ ಗೋಪಿ.



"ಬಿತ್ನಗೆ ಹಣಾ ಕೊಡೀ ಅಂತಾ ಕೇಳಿದ್ರೆ ಹಿಂದಿನ ಸಾಲಾ ಎಲ್ಲಾ ತೀರ್ಸೂ
ಅಂತಾನಲ್ಲಾ ನೋಡ್ದಾ ಆ ಬ್ಯಾಂಕ್ ವಯ್ಯನ ಧಿಮಾಕು !"



ನಾನು ನೋಡಿದ ಕ್ರಿಕೆಟ್ ಮ್ಯಾಚು

—ಪುಟ್ಟಿರಾಮು

(ಇಂಗ್ಲೆಂಡಿನಿಂದ ಬಂದ ಪತ್ರ)

ತಮ್ಮಯ್ಯ ಮಾವಗೆ ಪುಟ್ಟು ಮಾಡುವ ಅನಂತಾನಂತ ನಮಸ್ಕಾರಗಳು. ನಾನು ಇಲ್ಲಿ ಈವರೆಗೆ ಕ್ಷೇಮ. ಇಲ್ಲಿ ಮಳೆ ಗಾಳಿ ಚಳಿ ವಿಪರೀತವಾಗಿವೆ. ಇದೇ ಅಂತೆ ಇಲ್ಲಿಯವರಿಗೆ ಬೇಸಿಗೆ ಕಾಲ ! ನಾನು ಎಲ್ಲ ವಿಧದಲ್ಲೂ ಹುಷಾರಾಗಿದ್ದೇನೆ. ನನ್ನ ಮದುವೆ ವಿಚಾರದಲ್ಲಿ ನೀವು ನಾನು ಬರುವ ತನಕ ಯಾವ ನಿರ್ಧಾರಕ್ಕೂ ಬರಬೇಡಿ. ಅಲ್ಲಿಂದ ನಾನು ತಂದ ಚಟ್ನಿಪುಡಿ ಆಗಲೇ ಮುಗಿದುಹೋಯಿತು. ಪುಟ್ಟಿತಾಯಿ ಹತ್ತಿರ ಹೇಳಿ ಇನ್ನೊಂದಿಷ್ಟು ಮಾಡಿಸಿ ಏರ್ ಮೇಲಲ್ಲಿ ಕಳುಹಿಸಿಕೊಡಿ. ಶಾಂತಾ ಈಗ ಕೂಸು ಸಹಿತವಾಗಿ ಹಾಸನಕ್ಕೆ ಹೋಗಿರುತ್ತಾಳೆ ತಾನೆ ? ಇಲ್ಲಿಗೆ ಇಂಡ್ಯಾದಿಂದ ಬಂದಿರುವ ಭಾರಿ ಕ್ರಿಕೆಟ್ ಟೀಮಿನ ಆಟ ನೋಡಲು ನಾನೂ ಮೊನ್ನೆ ಹೋಗಿದ್ದೆ, ಅಂತ ನಾಣಿಗೆ ಹೇಳಿ. ಘಟಿಂಗ, ಅವನು ಅಲ್ಲಿ ನನ್ನನ್ನ ಸದಾ ಕೀಟಲೆ ಮಾಡುತ್ತಿದ್ದ; ಪುಟ್ಟುವಾಯಿತು, ಪುಸ್ತಕವಾಯಿತು: ಅವನಿಗೆ ಕ್ರಿಕೆಟ್ ಅಂದರೆ ಆಟವೋ, ಕೀಟವೋ ಗೊತ್ತಿಲ್ಲ ಅಂತ. ಮೊನ್ನೆ ನಾನು ಎಲ್ಲಾನೂ ತಿಳಿದುಕೊಂಡೆ. ಕ್ರಿಕೆಟ್ ಅಂದರೆ, ಏನೋ ಅಂತ ಇದ್ದೆ. ಶುದ್ಧ ಹುಚ್ಚು ಹುಚ್ಚು ! ನಾಣಿಗೆ ಹೇಳಿ: ನನಗದೆಲ್ಲ ಗೊತ್ತಾಗಿಹೋಯಿತು ಅಂತ. ಇನ್ನು ಮೇಲೆ ಅವನ ಕೈಲಿ ನನ್ನನ್ನ ದಬಾಯಿಸುವುದಕ್ಕಾಗುವುದಿಲ್ಲ ಅಂತ.

ಬಟ್ಟೆ ಬಯಲಲ್ಲಿ ಆ ಕಡೆ ಮೂರು ಕಡ್ಡಿ, ಈ ಕಡೆ ಮೂರು ಕಡ್ಡಿ ನೆಲಕ್ಕೆ ಸಿಕ್ಕಿಸಿರುತ್ತಾರೆ. ಅದರ ಸುತ್ತ ಕ್ಲೀನಾಗಿ ಬಿಳಿ ಬಟ್ಟೆ, ಉಲ್ಲನ್ ಸ್ವೆಟರ್ ತೊಟ್ಟುಕೊಂಡ ಧಾಂಡಿಗ ಮಹಾರಾಯರು, ಘತ್ತಾಳಿ ಗೊಂಬೆಗಳು. ಒಂದಿಷ್ಟು ಬಿಸಿಲು

ಹೊಡೆಯಲಿ, ಮಳೆ ಸುರಿಯಲಿ, ಮಂಜು ಕವಿಯಲಿ, ಸದಾ ಗಸ್ತು ತಿರುಗುತ್ತಿರುತ್ತಾರೆ. ಶಪಥಮಾಡುತ್ತ... ಅಲ್ಲವೇನೋ, ನಾಣಿ! ಜಂಟಲ್‌ಮನ್ನುಗಳಿಬ್ಬರು ಉದ್ದನೆಯ ಬಿಳಿ ಕೋಟು ಜೇಬಿನೊಳಕ್ಕೆ ಕೈ ತುರುಕಿಕೊಂಡು, ನಿಂತ ಕಾಲಲ್ಲೇ ಅವರು ಮಾಡುವ ತಮಾಷೆಯನ್ನೆಲ್ಲ ನೋಡುತ್ತ ಕಣ್ ಕಣ್ ಬಿಡುತ್ತಿರುತ್ತಾರೆ.

ಕಾಸು ಗೀಸು ಎಸೆಯುತ್ತಾರೆ: ತಲೆ ಬಾಲ ನೋಡುತ್ತಾರೆ: ಎಲ್ಲರೂ ಅಲ್ಲಲ್ಲಿ ಸೆಟೆದು ನಿಂತುಕೊಳ್ಳುತ್ತಾರೆ. ಒಂದು ಪಕ್ಕದ ಕಡ್ಡಿಗಳ ಹಿಂದೆ ಒಬ್ಬ ಮಹಾ ವಿಚಿತ್ರ ವ್ಯಕ್ತಿ ಸೊಂಟ ಬಗ್ಗಿಸಿ ಭವತಿ ಭಿಕ್ಷಾಂದೇಹಿ ಅಂತ ಕೈ ನೀಡಿಕೊಂಡು ಹಲ್ಲು ಕಿರಿಯುತ್ತಾನೆ. ಯಾಕೋ, ಏನೋ ಅವನನ್ನ ಕಾಣುತ್ತಲೂ, ಎದುರುಗಡೆಯಿಂದ ಒಬ್ಬ ಮಹಾರಾಯ ಕೋಪಾವೇಶದಲ್ಲಿ ಕುಣಿದು ಕುಪ್ಪಳಿಸಿ ಛಂಗನೆ ಹಾರಿ, ಬಿಳಿ ಕೋಟಿನ ಜಂಟಲ್‌ಮನ್ನನನ್ನೂ ದಾಟಿಕೊಂಡು ಓಡೋಡಿ ನುಗ್ಗಿ ಕೈಲಿರುವ ಕೆಂಭುಕಲ್ ಚೆಂಡನ್ನ ಆತನ ಮೂತಿಗೆ ಗುರಿಯಿಟ್ಟು ಬೀರುತ್ತಾನೆ. (ಆ ಬಿಳಿ ಕೋಟಿನವನ ತಲೆಯ ಮೇಲೆ ಯಾಕೆ ಅಷ್ಟೊಂದು ಹ್ಯಾಟುಗಳು ? ಒಂದರ ಮೇಲೊಂದು ? ಗೋಪುರದ ಹಾಗೆ ?) ಹೀಗೆ ಯಾವನಾದರೂ ಒಬ್ಬ ಬುದ್ಧಿ ಸ್ಥಿಮಿತ ತಪ್ಪಿ ತನ್ನ ಮೇಲೆ ತೂಕವಾದ ಚೆಂಡನ್ನೆಸೆದರೆ ಗತಿ ಏನು ಅಂತ ಆ ವಿಚಿತ್ರ ವ್ಯಕ್ತಿ ಕೂಡ ಆಗಲೇ, ಸದ್ಯ, ತಕ್ಕ ಎಚ್ಚರಿಕೆ ತೆಗೆದುಕೊಂಡಿದ್ದಾನೆ. ಎರಡು ಕೈಗಳಿಗೂ ದಪ್ಪ ದಪ್ಪ ದಿಂಬಿನ ತುಂಡುಗಳನ್ನು ಬಿಗಿದಿದ್ದಾನೆ. ಮುಂಡಿಯುದ್ದ ಎರಡು ಕಾಲುಗಳಿಗೂ ನೀಳವಾದ ದಿಂಬುಗಳು ಬೇರೆ.

ಆದರೂ, ಆ ಕೋಪಾವೇಶದ ಎದುರಾಳಿ ಬೀರಿದ ಚೆಂಡು ಆತನ ಮೈಮೇಲೆ ಬೀಳುವ ಹೊತ್ತಿಗೆ (ಆತನ ಸ್ನೇಹಿತ ಇರಬೇಕು) ಮತ್ತೊಬ್ಬ ಆಟಗಾರ ಅದನ್ನು ಅಗಲವಾದ ಹಲಗೆಯೊಂದರಿಂದ ತಡೆದು ನಿಲ್ಲಿಸಿದ, ಬೀಳುವ ಚೆಂಡು ತಪ್ಪಿದರೆ ಸಹಸ್ರಾಯುಸ್ಸು ಎಂದು ಆ ವಿಚಿತ್ರವೀರ್ಯ, ನೀಡಿದ ಕೈಗಳನ್ನು ಹಿಂದಕ್ಕೆಳೆದು, ಮುಖದ ಮೇಲಿನ ಬೆವರೊರೆಸಿಕೊಂಡು ನೆಟ್ಟಗೆ ನಿಲ್ಲುವ ವೇಳೆಗೆ ಎದುರುಗಡೆಯಿಂದ ಮತ್ತೊಂದು ಚೆಂಡು ಅವನನ್ನು ಹುಡುಕಿಕೊಂಡು ಬರುತ್ತದೆ! ಪಾಪ! ತನ್ನ ಸ್ನೇಹಿತನ ಬೀರಾಟ ಬೀಸಾಟಗಳಿಲ್ಲದೆ ಹೋದರೆ, ಆತನ ಮೈತುಂಬ ಬಾಸುಂಡೆಗಳು ಸಿದ್ಧ. ಅಂಥಾದ್ದರಲ್ಲಿ, ಹತ ಹಿಡಿದು, ಯಾಕೆ ಅಲ್ಲಿ ಹಾಗೆ ನಿಲ್ಲಬೇಕೋ. ಕಾಣೆ. ಚೆಂಡು ಎಸೆಯುವ ಪುಂಡನನ್ನು ಪೋಲೀಸಿಗೆ ಕೊಟ್ಟುಬಿಟ್ಟು ಹಾಯಾಗಿ ಮನೆಗೆ ಹೋಗಿ ಹೊಗೆ ಸೇದುತ್ತಾ ಬಿದ್ದಿರಬಾರದೆ, ಅಷ್ಟು ಜನವೂ ? ಈ ಇಂಗ್ಲಿಷರ ಮನೋಭಾವ ಅರ್ಥಮಾಡಿಕೊಳ್ಳುವುದೇ ಕಷ್ಟ. ಎಸೆಯುವುದಕ್ಕೆ ಅವಕಾಶ

ಕೊಟ್ಟ ಮೇಲೆ ಧೈರ್ಯವಾಗಿ ಎದೆಕೊಡಬಾರದೆ ? ದಿಂಬು ಕಟ್ಟಿಕೊಳ್ಳೋದು ಏಕೆ ? ಗೂಟದ ಹಿಂದೆ ಅವಿತುಕೊಳ್ಳೋದೇನು ? ಹಲಗೆ ಸ್ನೇಹಿತನ ಸಹಾಯ ಕೋರುವುದೆಂದರೇನು ? ಥೂ.

ಕೆಲ ವೇಳೆ ಹಲಗೆ ಹಿಡಿದ ಆಸಾಮಿ ಆ ಹಾಳು ಚೆಂಡನ್ನ ದೂರಕ್ಕೆ ಹೊಡೆದು ಅಟ್ಟುತ್ತಾನೆ. ಆಗಿನ ಕೋಲಾಹಲವೇ ಕೋಲಾಹಲ. ನಾಲ್ಕಾರು ಜನ ಅದರ ಹಿಂದೆ ಜಿಂಕೆ ಮರಿಗಳ ಹಾಗೆ ಓಡಿ ಅದನ್ನು ಎತ್ತಿ ತಂದು ಮತ್ತೆ ಆ ಮುಂಗೋಪಿಯ ಕೈಗೆ ಕೊಡುತ್ತಾರೆ. ಹೊಡೆದವನು ಕೂಡ, ಸುಮ್ಮನೆ ನಿಂತಿರುವುದಿಲ್ಲ. ಅವನೂ ವಿಪರೀತ ರೇಗಿರುತ್ತಾನೆ. ಬಂದ ಕೋಪದಲ್ಲಿ, ಅವನು ಹಲಗೆ ಸಹಿತವಾಗಿ, ಎಸೆದವನ ಹತ್ತಿರಕ್ಕೆ ಓಡುತ್ತಾನೆ. ಅಲ್ಲಿ ಆ ಕಡೆ ನಿಂತಿರುವ ಉದ್ದನೆಯ ಅಂಗಿಯ ಜಂಟಲ್‌ಮನ್ನನ್ನು ಕಾಣುತ್ತಲೂ, ಹೆದರಿ ಮತ್ತೆ ಸ್ವಸ್ಥಾನಕ್ಕೆ ಓಡಿಬರುತ್ತಾನೆ. ಆಗ ಅದೇ ಉಡುಪಿನ ಮತ್ತೊಬ್ಬ ಅಲ್ಲೂ ಇರುವುದನ್ನು ಕಂಡು ಮತ್ತೊಮ್ಮೆ ಅತ್ತ ಧಾವಿಸುತ್ತಾನೆ. ಅದುವರೆಗೂ ತೆಪ್ಪಗಿದ್ದ ಮತ್ತೊಬ್ಬ ಹಲಗೆಯವನಿಗೂ ಇದೇ ಹುಚ್ಚು ಹಿಡಿದು, ಇಬ್ಬರೂ ಪರದಾಡಿ ಹರಿದಾಡಿ, ಉಸಿರು ಕಟ್ಟಿಕೊಂಡು ಒಂದೊಂದು ಕಡೆ ನಿಂತುಕೊಳ್ಳುತ್ತಾರೆ. ಇಂಥ ಗಡಿಬಿಡಿಯಲ್ಲಿ, ಜನ ತಳಮಳಿಸುತ್ತಿರುವಾಗ, ಕೆಲವು ವೇಳೆ ಯಾರೋ ಒಬ್ಬ ಎಲ್ಲೋ ಜ್ಞಾನದಲ್ಲಿ ಚೆಂಡನ್ನು ಸಂಪಾದಿಸಿ, ಆ ವಿಚಿತ್ರ ವ್ಯಕ್ತಿಯ ಕೈಗೆ ಕೊಡುವುದೂ ಉಂಟು. ಕೂಡಲೆ, ಆವನು ಅದನ್ನು ಮುಯ್ಯಿಗೆ ಮುಯ್ಯಿ ತೀರಿಸುವುದಕ್ಕೆ ಅಂತ ಉಪಯೋಗಿಸುವುದೇ ಇಲ್ಲ. ಪಾಪ; ಅದನ್ನು ತನ್ನ ಎದುರುಗಿರುವ ಕಡ್ಡಿಗಳ ಮೇಲೆ ಎಸೆದು ಹೊಟ್ಟೆ ಉರಿ ತೀರಿಸಿಕೊಳ್ಳುತ್ತಾನೆ. ಗುರಿಯಿಟ್ಟು ತನ್ನ ಶತ್ರುವಿನ ಮೂತಿಗೆ ಎಸೆದಿದ್ದರೆ, ಯಾರೂ ಬೇಡ ಅನ್ನುವ ಹಾಗಿಲ್ಲ. ಆದರೂ, ಆತ ಬಹಳ ತಾಳ್ಮೆಯಿಂದ ವರ್ತಿಸುತ್ತಾನೆ. ಆದರೆ, ಸುತ್ತ ನಿಂತಿರುವ ಯುವಕರೆಲ್ಲ "ಹೌಸಾಟ್, ಹೌಸಾಟ್" ಎಂದು ಕೂಗುತ್ತಾರೆ. ಆ ಮಾತು ಯಾವ ಡಿಕ್ಷನರಿಯಲ್ಲೂ ಇಲ್ಲ. ಆದರೂ ಟೋಪಿ ಗೋಪುರದವನಿಗೆ ಅರ್ಥವಾಗುತ್ತದೆ. ಆವನು ಕೈ ಹಲಗೆಯವರ ಪೈಕಿ ಒಬ್ಬನನ್ನು ಮನೆಗೆ ಕಳುಹಿಸುತ್ತಾನೆ. ಅವನು ಉದ್ದಕ್ಕೂ ತಿರುಗಿನೋಡುತ್ತ ಗೊಣಗುಟ್ಟುತ್ತ ಹೊರ ಬಂದು *ಮತ್ತಗೆ ಮತ್ತೊಬ್ಬನನ್ನು ಕಳುಹಿಸಿಕೊಡುತ್ತಾನೆ. ಹೀಗೆ ಎಸೆದಾಟ, ಪರದಾಟಗಳು ಮುಂದುವರಿಯುತ್ತವೆ.

ಮತ್ತೊಂದು ತಮಾಷೆ ! ಐದು ನಿಮಿಷಕ್ಕೊಂದು ಸಲ ಎಸೆಯುವವನನ್ನು ಬದಲಾಯಿಸುತ್ತಾರೆ. ಹೊರ ತೋಳಿನವನೊಬ್ಬ ಅಂಗಿ ಬಿಚ್ಚಿ, ಹತ್ತಿರದ ಜಂಟಲ್‌ಮನ್ ಹೆಗಲಿಗೆ ತಗಲು ಹಾಕಿ, ಟೋಪಿ ತೆಗೆದು ಅವನ ಶಟಗೋಪುರದ

ಹೋಲಿಡುತ್ತಾನೆ, ಅನುಕೂಲಕ್ಕೆ ತಕ್ಕಂತೆ ಬಲಗೈಯನ್ನೋ ಎಡಗೈಯನ್ನೋ ಬೀಸಿ ಬಿಸಿ ಮಾಡಿ ಕೆಂಡ ಕಾರಿ ನೆಗೆದು ಘಂಗಿಸಿ ಅವನೂ ಪ್ರಾರಂಭ ಮಾಡುತ್ತಾನೆ. ಕಡ್ಡಿ ಹಿಂದಣ ದಾಂಡಿಗನ ಮೂಗು ಮುರಿಯುವ ಸಾಹಸಕ್ಕೆ ಹೊಸ ಬೀರು ಬಂದ ತಕ್ಷಣವೇ ಆಟಗಾರರೆಲ್ಲ ತಮ್ಮ ತಮ್ಮ ಜಾಗ ಬದಲಾಯಿಸಿ, ಕೈ ಬೀಸಿಕೊಂಡು ಬಯಲೆಲ್ಲ ತುಳಿದಾಡಿ, ಕಡೆಗೆ ಸೊಂಟ ಬಗ್ಗಿಸಿ, ಕತ್ತು ನೀಡಿಕೊಂಡು ನಿಲ್ಲುತ್ತಾರೆ. ಆ ವಿಚಿತ್ರವೀರ್ಯನಿಗೂ ಸ್ಥಾನ ಪಲ್ಲಟಕ್ಕೆ ಅವಕಾಶ ಕೊಡುತ್ತಾರೆ. ಉದ್ದಂಗಿ ಮಹಾರಾಯರೂ ಕೂಡ ಕಾಲಾಡಿಸಿ ಕವಲುತ್ತಾರೆ. ಒಳ್ಳೆಯ ವಕ್ರ ಪುಚ್ಛಗಳು ಅವು ಎರಡೂ ! ನೆನೆದರೆ ನನಗೆ ಈಗಲೂ ನಗು ಬರುತ್ತದೆ.

ಹೀಗೆ ಅವರೆಲ್ಲ ಗೋಳಾಡಿಕೊಂಡು. ನಮ್ಮನ್ನು ಗೋಳಾಡಿಸುತ್ತಿರುವ ಸಮಯದಲ್ಲಿ ನನ್ನ ಕಣ್ಣಿಗೆ ಇನ್ನೊಂದು ಸೋಜಿಗ ಕಾಣಿಸಿತು. ಆ ಬಯಲ ಅಂಚಿನಲ್ಲಿ ಒಂದು ಕಡೆ ಭಾರಿ ಬೋರ್ಡು ಒಂದು ಹುಟ್ಟಿಕೊಂಡಿತ್ತು. ಸುಮಾರು ೧೨ಅಡಿ ಎತ್ತರ: ೧೮ ಅಡಿ ಅಗಲ ! ಯಾವುದೋ ಸ್ಕೂಲು ಮೇಷ್ಟರು ಲೆಕ್ಕ ಜೇರೆ ಮಾಡಿದ್ದರು ಅದರ ಮೇಲೆ. ಎ ಬಿ ಸಿ ಡಿ ಬೇರೆ ಅದರಲ್ಲಿ. ದಪ್ಪ ದಪ್ಪವಾಗಿ. ಅದನ್ನು ನೋಡಿದಾಗ ನನಗೆ ಅಯ್ಯೋ, ಮಂಕರಾ ! ಅನ್ನಿಸಿತು. ಹಾಯಾಗಿ ಆ ಬೋರ್ಡನ್ನೇ ಎಳೆದು ತಂದು ಮೂರು ಕಡ್ಡಿಗಳ ಹಿಂದೆ ನಿಲ್ಲಿಸಿ ಬಿಟ್ಟಿದ್ದರೆ, ಅಷ್ಟು ಕಷ್ಟವೂ ಸುಲಭದಲ್ಲೇ ತಪ್ಪುತ್ತಿತ್ತಲ್ಲಾ ! ಅದರ ಮೇಲೆ ತಮ್ಮ ತೋಳುಗಳೆರಡೂ ಕಿತ್ತು ಬೀಳುವ ತನಕ ಆ ಸಿಡುಕರಿಬ್ಬರೂ ಚೆಂಡೆಸೆದುಕೊಳ್ಳಲಿ ಠಪಾ ಠಪಾ ಅಂತ. ಗುರಿ ಬೇರೆ ತಪ್ಪುವ ಹಾಗಿಲ್ಲ. ಯಾರಿಗೂ ಏನೂ ಅಪಾಯವೂ ಇಲ್ಲ. ದಿಂಬು ಕಟ್ಟಿಕೊಂಡು ಆತ ಕಡ್ಡಿಗಳ ಹಿಂದೆ ಕಣ್ಣಾಮುಚ್ಚಾಲೆ ಕುಣಿಯಬೇಕಾಗಿಯೂ ಇಲ್ಲ. ಅವನ ಗೆಳೆಯರು ಹಲಗೆ ತುಂಡು ಹಿಡಿದು ಹೊಡೆದಟ್ಟಿಸಿ ಎಸೆದವನ ಮೇಲೆ ಹೋಗಿ ಬೀಳಬೇಕಾಗಿಯೂ ಇಲ್ಲ.

ಮುಖ್ಯ, ಮೆದುಳು ಬೇಕು. ಸಮಯೋಚಿತವಾಗಿ ಬೆಳಕು ಹೊಳೆಯಬೇಕು. ಇಂಥ ಆಟವನ್ನ ಇವರ ಜೊತೆ ಆಡುವುದಕ್ಕೆ ಅಂತ ನಮ್ಮೂರಿಂದ ನವಾಬರೂ ವಿಜಯ ವ್ಯಾಪಾರಿಗಳೂ ಏಕೆ ಬರಬೇಕೋ. ದೇವರೇ, ಬಲ್ಲ: ನಾನೇನೋ ಬಲ್ಲ !



“ನಾನು ಈಗ ಪಂಚಾಯ್ತಿ ನಂಬ್ರು ತಿಳ್ಕ ! ಹಿಂದಕ್ ಬರೊ ವೊತ್ಗ
ಸರ್ಯಾಗ್ ಆಟ್ಟ್ ಮಡ್ಗ ! ”

ಅನಾಮಧೇಯರಿಂದ
ಸ್ವಾತಂತ್ರ್ಯದ ಸಿಂಹಾವಲೋಕನ

(ವಿಚಾರ ಸಂಕಿರಣ)

—ದುರ್ವಿನೀತ

ಗುಡ್ಡಪ್ಪ, ಬೆಟ್ಟದ ಪಳ್ಳಿ :

1932ರ ಸುಮಾರು. ನಮ್ಮೂರ ಬೆಟ್ಟದ ಮೇಲೆ (ನಿಜವಾಗಿ ಅದೊಂದು ದಿನ್ನೆ) ದಟ್ಟವಾದ ಕಾಡು ಇತ್ತು. ನಾಲ್ಕು ಕಡೆಗಳಲ್ಲೂ ಭಾರೀ ಅರಳಿ ಆಲದ ಮರಗಳಿದ್ದವು. ಬೆಟ್ಟದ ಸುತ್ತಲೂ ಈಚಲು ವನ, ಸಂಜೆಯಾದ ಮೇಲೆ ಆ ಕಡೆಗೆ ಹೋಗಲು ಹೆದರುತ್ತಿದ್ದೆವು. ನಮ್ಮೂರು ಈಚಲು ಪಾನಕ ಆಗ ಬಲು ಪ್ರಸಿದ್ಧಿ. ದಾಸಣ್ಣನ ಹೆಂಡದಂಗಡಿಗೆ ದೂರ ದೂರದ ಊರಿನವರೂ ಕತ್ತಲಾದ ಮೇಲೆ ಬಂದು ಕದ್ದು ಕಳ್ಳು ಕುಡಿಯುತ್ತಿದ್ದರು.

ಆಗ ಸ್ವಾತಂತ್ರ್ಯ ಚಳುವಳಿ ನಮ್ಮೂರಿಗೆ ಬಂತು. ನಾವು ಹುಡುಗರು ಪೋಲೀಸಿಗೆ ಹೆದರದೆ ನುಗ್ಗಿ ಈಚಲಮರ ಕಡಿದು ಜೈಲಿಗೆ ಹೋದೆವು. ನಮ್ಮ ಒರಟು ಖಾದಿ ಬಟ್ಟೆ ಜನರ ಗೌರವವನ್ನು ತಂದುಕೊಡುತ್ತಿತ್ತು. ನಮ್ಮೂರಿನಲ್ಲಿ ಖಾದಿ ಕೇಂದ್ರವೂ ಆರಂಭವಾಯಿತು. ನಾನು ಹೊಟ್ಟೆಪಾಡಿಗಾಗಿ ಎಲ್ಲೆಲ್ಲಿಗೋ ಹೋಗಿ ದುಡಿದು ಅರೆಹೊಟ್ಟೆ, ರೋಗರುಜಿನ ಕಷ್ಟಗಳನ್ನನುಭವಿಸಿ, ಮುಪ್ಪಿನಲ್ಲಿ ನಮ್ಮ ಊರಿಗೆ ಹಿಂದಿರುಗಿದೆ. ಈಗ ಬೆಟ್ಟದ ಸುತ್ತಲ ಈಚಲ ವನವಿಲ್ಲ, ಬರಗಾಲದಲ್ಲಿ ಅದರ ಗಡ್ಡೆ ತಿಂದೇ ಜನ ಬದುಕಿದರಂತೆ. ಬೋಳು ಗುಡ್ಡ : ಅಲ್ಲೊಂದಿಲ್ಲೊಂದು ಬಳ್ಳಾರಿ ಜಾಲಿ ಗಿಡ.

ಬೆಟ್ಟದ ತುದಿಯಲ್ಲಿ ಅಂದೆಂಥದೋ ಕಲ್ಲೋ, ಮಣ್ಣೋ ಇದೆಯಂತೆ. ಅದನ್ನು ನೋಡಲು ದೂರ ದೂರದ ಜನ ಬರುತ್ತಾರೆ. ದಾಸಣ್ಣನ ಮಕ್ಕಳು ವೈನ್ ಷಾಪ್ ಇಟ್ಟಿದ್ದಾರೆ. ಅದರಲ್ಲಿ ಭಾರಿ ವ್ಯಾಪಾರ, ಖಾಲಿ ಬಾಟಲಿಗಳು ಗುಡ್ಡದ ನಾಲ್ಕು ಕಡೆ ಕಾಣಸುತ್ತವೆ. ನನ್ನ ಬಿಳಿ ಟೋಪಿ ನೋಡಿ ಜನ ಪುಢಾರಿ ಎಂದು ಹಂಗಿಸುತ್ತಾರೆ. ಖಾದಿ ಕೇಂದ್ರ ಲಾಕ್ ಔಟ್ ಆಗಿದೆ. ಇನ್ನೇನು ಬೇಕು !

ಬೇಕು. ಕಲ್ಕತ್ತಾ:

ತಂತ್ರ ಎಂದರೆ ಮೋಸ, ಏಮಾರಿ, ದಗಲ್ಬಾಜಿ ಎಂದೇನೂ ಅರ್ಥವಿಲ್ಲ. ತಂತ್ರ ಎಂದರೆ ಕಾರ್ಯವಿಧಾನ. ಆದರೆ, ನರಿಯಣ್ಣ, ಕಾಗಕ್ಕ ಇವರ ತಂತ್ರಗಳೇ. ತಂತ್ರ ಎಂದೊಡನೆ ನೆನಪಾಗುತ್ತವೆ. ಪಂಚತಂತ್ರ, ಷಟ್ತಂತ್ರ ಇತ್ಯಾದಿಗಳೇ ಈಗ ಪ್ರಸಿದ್ಧ.

ಪರದೇಶದವರು ಆಳುವುದನ್ನು ತಪ್ಪಿಸಲು ಸ್ವಾತಂತ್ರ್ಯ ಚಳವಳಿ ಆರಂಭವಾಗುತ್ತದೆ. ವಿದೇಶೀಯರು ಮಾಡುವ ದಬ್ಬಾಳಿಕೆ ಶೋಷಣೆಗಳನ್ನು ಮೊದಲು ಪ್ರಚಾರ ಮಾಡಬೇಕು.

ಬಳಿಕ ಸ್ವಾತಂತ್ರ್ಯ ಲಾಭದ ಹೊಗಳಿಕೆ. ಸ್ವತಂತ್ರ ಬಂದರೆ ನಾಡು ನಂದನವನವಾಗುತ್ತದೆ ; ಹಂಗಿನರಮನೆಗಿಂತ ಇಂಗದ ಗುಡಿ ಲೇಸು ; ನಾವು ಪಡೆಯಲಿರುವ ಸಮೃದ್ಧಿಯ ಹೊಳೆ ; ಕೊನೆಗಾಣಿಸಲಿರುವ ಭಂಗಗಳನ್ನು ವರ್ಣಿಸುವುದು. ಸ್ವಾತಂತ್ರ್ಯ ದೇವಿಗೆ ಹಲವಾರು ಜನಗಳನ್ನು ಬಲಿಕೊಡುವುದು. ಅವರನ್ನು ಕೊಂದರೆಂದು ವಿದೇಶೀಯರನ್ನು ನಿಂದಿಸುವುದು. ಸರಕಾರಕ್ಕೆ ತೆರಿಗೆ ಕೊಡಬೇಡಿರೆಂದು ಜನಗಳನ್ನು ಹುರಿದುಂಬಿಸುವುದು.

ಕೊನೆಗೆ ಈ ರಂಪ ತಾಳಲಾರದೆ ಸ್ವಾತಂತ್ರ್ಯ ಸಿಗುತ್ತದೆ.

ಆಗ ಆರಂಭವಾಗುತ್ತದೆ. ಹಣ, ಹೆಂಡಗಳ ದಾಳಿ. ಅದು ಅನಿವಾರ್ಯವಲ್ಲವೇ ಇಡೀ ಜೀವನವೆಲ್ಲಾ ಹಾಗೇ ಸಾಯುವುದರ ಬದಲು, ಸಿಕ್ಕಾಗ ಸಿಕ್ಕಿದಷ್ಟನ್ನು ದಕ್ಕಿಸಿಕೊಂಡದ್ದೇ ಬಂತು. ಹೆಂಡ, ಹಣಗಳು ಚಿಕ್ಕ ಮೀನುಗಳು. ತಿಮಿಂತಿಮಿಂಗಿಲಾದಿಗಳನ್ನು ತಿನ್ನಲು, ಹಡಗನ್ನು ನುಂಗಲು ಅಧಿಕಾರವೇ ಬೇಕು. ಅದಕ್ಕಾಗಿ ಪ್ರತಿನಿಧಿಗಳ ಜಗಳ ಆರಂಭ. ಅಧಿಕಾರಕ್ಕೆ ಬಂದಮೇಲೆ ಸರ್ವಂಭಕ್ಷಯಾಮಿ, ಸಾಗರಂ ಭಕ್ಷಯಾಮಿ.

ಇದರಲ್ಲಿ ಸಂಸ್ಕೃತಿ, ಅಧ್ಯಾತ್ಮ ಇತ್ಯಾದಿಗಳನ್ನೇ ಬಳಸಿಕೊಂಡರೆ, ನಮ್ಮನ್ನು ಹೊಗಳುತ್ತಾರೆಂದು ಸಂಬಂಧಿಸಿದ ವಲಯಗಳು ಭಾವಿಸುತ್ತವೆ.

ನಾನು ಕಲ್ಕತ್ತಕ್ಕೆ ಬರುವ ಮೊದಲು ಒಂದು ಹಳ್ಳಿಯಲ್ಲಿದ್ದೆ. ಆಗ ನಮ್ಮೂರಿನಲ್ಲಿ ತೋಟಗಳಿದ್ದವು. ನಮ್ಮ ಊರಿಗೆ ಪ್ರಗತಿ ಕಾಲಿಟ್ಟಿತು. ಹೇಗೆ ಎಂದರೆ ಇಸ್ಪೀಟು, ಬಾರ್ ಮತ್ತು ಮಿಲಿಟರಿ ಹೋಟಲು ಬಂದವು.

ಆಗ ಯಜಮಾನ, ಚಿಕ್ಕ ಯಜಮಾನ ಮತ್ತು ಮಕ್ಕಳು ಸರದಿ ಪ್ರಕಾರ ತೋಟ ಕಾಯಲು ಆರಂಭಿಸಿದರು. ಒಬ್ಬೊಬ್ಬರಿಗೆ ಎರಡರಂತೆ, ಆರರಂತೆ ಯಥಾ ಶಕ್ತಿಯಾಗಿ ಅವರ ಅಥವಾ ಪಕ್ಕದ ತೋಟಗಳ ತೆಂಗಿನಕಾಯಿಗಳು ಮಾಯವಾಗ ಪ್ರಾರಂಭಿಸಿದವು. ಕೋಡಿಹಳ್ಳದ ಪಕ್ಕದಲ್ಲಿದ್ದ ಶ್ರೀಗಂಧದ ಮರಗಳು ಮಾಯವಾದವು. ಹಲಸಿನ ಕಾಯಿಗಳು ಹಾರಿಹೋದವು. ಪಾರ್ಥೇನಿಯಂ ಎಲ್ಲೆಡೆ ಹುಲುಸಾಗಿ ಬೆಳೆಯಿತು.

ಈಗ ಕೆರೆ ಖಾಲಿ, ತೋಟಗಳೆಲ್ಲಾ ಮಾಯ. ಬೆಂದಬೂದಿಯ ಮಣ್ಣು ಕಣ್ಣಿಗೆ ಹಾರಿಬರುತ್ತದೆ.

ಚಿಕ್ಕ, ಮುಂಬಯಿ :

ಸ್ವಾತಂತ್ರ್ಯವು ನಮಗೆ ಜನ್ಮದತ್ತ ಹಕ್ಕು ಆ ಹಕ್ಕು. ನಮಗೆ ಈ ಮೊದಲೇ ಇದ್ದುಬಿಟ್ಟಿದ್ದರೆ, ನಮಗೆ ಸರಿಯಾದ ಮಾರ್ಗದರ್ಶನ ಇಲ್ಲದಿದ್ದರೆ ಸ್ವಾತಂತ್ರವೆಂಬುದು ನಮ್ಮ ಚಿನ್ನದ ಈಟಿ. ಈಟಿ ನಮ್ಮದು, ಅದನ್ನು ಹೇಗೆ ಬೇಕಾದರೂ ಬಳಸಿಕೊಳ್ಳುವ ಹಕ್ಕು ನಮಗಿದೆ. ಅದನ್ನು ನಮ್ಮ ಎದೆಗೇ ಇರಿದುಕೊಳ್ಳುತ್ತೇವೆ ಎಂದು ಹೇಳಲೂ ಹಕ್ಕನ್ನು ಕೊಡುತ್ತದೆ–ಸ್ವಾತಂತ್ರ್ಯ.

ಹೇಗೋ ಏನೋ ಪೂರ್ವಜನ್ಮದ ಪುಣ್ಯದಿಂದ ಬದುಕಿದ್ದೇವೆ. ನಮ್ಮ ಆಟ ನಡೆಯುತ್ತದೆ. ತಲೆ ಬುರುಡೆ ಗಟ್ಟಿಯಾಗಿದೆ. ಇದುರಿನಲ್ಲಿ ಕಾಣುವ ಬಂಡೆಗೆ ಡಿಕ್ಕಿ ಹೊಡೆಯುತ್ತೇವೆ ಎನ್ನುವ ಸ್ಥಿತಿ ಉಂಟಾಗುತ್ತದೆ.

ಸ್ವತಂತ್ರ ದೇಶದಲ್ಲಿ ಇರುವ ಅತಿ ದೊಡ್ಡ ವರ ಮತ್ತು ಶಾಪವೆಂದರೆ ಕಾನೂನುಗಳು, ಇವನ್ನು ಮಾಡುವುದು, ಬಿಡುವುದು ಸರ್ಕಾರದ ಕೈಯಲ್ಲಿರುತ್ತದೆ, ಎಂದರೆ ಶಾಸಕಾಂಗದಲ್ಲಿ ಬಹುಮತವಿರುವ ಪಕ್ಷಕ್ಕೆ ಅಧಿಕಾರವಿರುತ್ತದೆ. ಅದಕ್ಕೊಬ್ಬ ನಾಯಕನಿರುತ್ತಾನೆ. ಅವನು ಹೇಳಿದಂತೆ ಕೇಳುವ ಹಕ್ಕು ಆಡಳಿತ ಪಕ್ಷಕ್ಕಿರುತ್ತದೆ, ನಾಯಕನನ್ನು ಬದಲಾಯಿಸುವ ಹಕ್ಕು ಅದಕ್ಕಿರುತ್ತದೆ.

ಹೇಗೆಂದರೆ :

ಪಕ್ಷಿ ರಾಜ್ಯದಲ್ಲಿ ರಣಹದ್ದುಗಳು, ಗಿಡಗಗಳದೇ ಅಧಿಕಾರ ಎನ್ನೋಣ. ಗಿಳಿ, ಪಾರಿವಾಳಗಳಿಗೆ ಎಲ್ಲೆಂದರಲ್ಲಿ ಹಾರಾಡುವ, ಚಿಲಿಪಿಲಿಗುಟ್ಟುವ ಹಕ್ಕು ಇದೆ. ಹಾಗೆಯೇ ಗಿಡಗಗಳಿಗೆ ಗಿಳಿಗಳನ್ನು ಎಲ್ಲೆಂದರಲ್ಲಿ ಹಿಡಿಯುವ, ಕೊಲ್ಲುವ ಹಕ್ಕು ಇದೆ.

ಅದನ್ನು ಪ್ರತಿಭಟಿಸುವ, ಬದುಕುವ ಹಕ್ಕು ಗಿಳಿಗಳಿಗೆ ಇದೆ. ಆ ಹಕ್ಕನ್ನು ಗಿಳಿ, ಗುಬ್ಬಿ, ಗೊರವಂಕಗಳಿಗೆ ಸಂಪೂರ್ಣವಾಗಿ ದಯಪಾಲಿಸಿದ್ದೇವೆ ಎಂದು ಗಿಡಗ ಮುಖ್ಯಸ್ಥ ಹೇಳಿಕೆ ಇತ್ತರೆ ಆಯಿತು. ಬಹು ಸಂಖ್ಯಾತ ಹದ್ದು ಗಿಡಗಗಳು ಅದು ನಿಜ ಎಂದು ಅನುಮೋದಿಸುವ ಹಕ್ಕನ್ನು ಚಲಾಯಿಸುತ್ತವೆ ಎಂದ ಮೇಲೆ ಗಿಳಿಗಳಿಗೆ, ಕೋಗಿಲೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಕಾಗೆಗಳಿಂದ ಕೋಗಿಲೆಗಳಿಗೆ ಸಂಪೂರ್ಣ ಬೆಂಬಲವಿದೆ ಎಂಬುದನ್ನು ಯಾರಾದರೂ ಒಪ್ಪಿಕೊಳ್ಳಲೇಬೇಕು.

ಅವಿನಾಶ್, ಭಟಿಂಡಾ :

ಸ್ವತಂತ್ರ ಪ್ರಜೆ ಎಂದರೆ, ಮಹಾತ್ಮಾ ಗಾಂಧೀಜಿಯವರು ಹೇಳಿದ ಸ್ವರಾಜ್ಯವನ್ನು ಪಡೆದವನು. ಸ್ವರಾಜ್ಯ ಎಂದರೆ ಸ್ವಾವಲಂಬನ. ಪ್ರತಿಯೊಂದು ಹಳ್ಳಿಯೂ ಪಟ್ಟಣವೂ ತನ್ನ ಮೇಲೆ ತಾನು ಅವಲಂಬಿಸಿರಬಲ್ಲ ಸಾಮರ್ಥ್ಯವನ್ನು ಪಡೆದಿರುವುದು. ಎಂದರೆ ಎಲ್ಲರೂ ತಮ್ಮ ತಮ್ಮ ಕರ್ತವ್ಯದಲ್ಲಿ ಮಗ್ನರಾಗಿರುವುದು ಮತ್ತು ಇತರರ ಬಗೆಗೆ ಸ್ನೇಹವೊಂದನ್ನೇ ತೋರಿಸುವುದು. ಇದನ್ನೇ ಬಹುಶಃ ಮಹಾತ್ಮರು ರಾಮರಾಜ್ಯವೆಂದು ಕರೆದಿರಬೇಕು.

ಆದರೆ ರಾಮರಾಜ್ಯವು ಸತ್ಯ, ಅಹಿಂಸೆ, ನ್ಯಾಯದ ತಳಹದಿಯ ಮೇಲಿತ್ತು ಎಂಬ ಬಗ್ಗೆ ನನಗೆ ಅನುಮಾನವಿದೆ. ಆ ರಾಜ್ಯ ಹಿಂದಿರುಗುವುದು ನನಗೆ ಬೇಕಿಲ್ಲ ಎಂದು ಅವರ ಪಟ್ಟ ಶಿಷ್ಯರೇ ಪತ್ರ ಬರೆದು ತಿಳಿಸಿದ್ದರಂತೆ. ಆದುದರಿಂದ ನಾವು ಪ್ರಜಾಪ್ರಭುತ್ವವನ್ನು ಆರಿಸಿಕೊಂಡೆವು. ಎಂದರೆ ಎಲೆಕ್ಷನ್ ನಡೆಸುವುದು. ಯುದ್ಧ ಮತ್ತು ಎಲೆಕ್ಷನ್‌ಗಳಲ್ಲಿ ಎಲ್ಲವೂ ಸರಿಯೇ. ಗೆಲ್ಲುವುದೇ ಮುಖ್ಯ. ಶಾಂತಿ ಎಂದರೆ ಎಲ್ಲೂ ಬಡಿದಾಟ, ಗೋಲಿಬಾರ್ ಇತ್ಯಾದಿಗಳು ನಡೆಯದೆ ಇರುವುದು. ಸಾಮಾನ್ಯವಾಗಿ ಶಾಂತಿಯುತವಾಗಿ ಚುನಾವಣೆ ನಡೆಯಿತು ಎಂದರೆ ಆಯಿತು. ಅದು ಉಂಟು ಮಾಡುವ ಸೈಡ್ ಎಫೆಕ್ಟ್‌ಗಳು ಮುಖ್ಯವಲ್ಲ. ಇದರಿಂದ ಸಮಾಜದ ಆಂತರಿಕ ಬಿರುಕುಗಳು ಲೆಕ್ಕಕ್ಕಿಲ್ಲ. ಇದರಿಂದ-ಹಿಂಸಾಚಾರ ವ್ಯಾಪಕವಾಗುತ್ತದೆ. ಹಿಂಸಾಚಾರದ ಫಲಗಳು ಹಲವು; ಸಾಯಲು, ಕೊಲ್ಲಲು ವಿಶೇಷ ಸವಲತ್ತುಗಳು ದೊರೆಯುತ್ತವೆ.

ಇತ್ತ ರಾಜಕೀಯದ ಅಗತ್ಯಗಳಿಗಾಗಿ ಏನೆಲ್ಲ ನಡೆಯುತ್ತಿರುತ್ತದೆ. ಯಾರು ಅಧಿಕಾರಕ್ಕೆ ಬರಬೇಕು, ಉಳಿಯಬೇಕು, ಯಾರನ್ನು ಶಾಳಿಯಬೇಕು; ಯಾರು ಹೇಗೆ ಇತ್ಯಾದಿಗಳು,

ಇದೇ ಸ್ವಾತಂತ್ರ್ಯ ; ಇದರ ಫಲ ಎಲ್ಲೆಲ್ಲೂ ಸ್ಪಷ್ಟವಾಗಿ ಬಿಸಿಲಂತೆ ಹರಡಿದೆ.

ಒಂದು ಪ್ರಶ್ನೆ :

ರಾಮರಾಜ್ಯ ಬೇಕೆಂದರೂ ಈಗ ಬರುವುದಿಲ್ಲ. ಏಕೆಂದರೆ ಇದು ಕಲಿಯುಗ. ಎಂಥ ರಾಜ್ಯ ಬೇಕೆಂದು ಲೆಕ್ಕವಿಲ್ಲದಷ್ಟು ಜನ ಶ್ರಮಿಸಿದರೋ. ಅವರ ಗತಿ ಏನೇನಾಗಿದೆ, ಆಗುತ್ತದೆ ?

ಇನ್ನೊಂದು ಪ್ರಶ್ನೆ :

ಆಧ್ಯಾತ್ಮಿಕ ಮೌಲ್ಯಗಳನ್ನು ಕುರಿತು ಹಿರಿಯ ನಾಯಕರುಗಳು ಆಗಾಗ ಹೇಳುತ್ತಿರುತ್ತಾರಲ್ಲ, ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಬೆಲೆ ಇದೆಯೋ ? ಅವರುಗಳ ಭಾಷಣಗಳನ್ನುಳಿದು ಇನ್ನೆಲ್ಲಿಯಾದರೂ ಅದು ಇದೆಯೋ ?

ಸರ್ವ, ಉದಯಪುರ

ಸ್ವಾತಂತ್ರ್ಯ ಬಂತು. ಪ್ರಜಾಪ್ರಭುತ್ವ ತಂತು. ಅದಕ್ಕೆ ಮೂಲಸ್ತಂಭ ವಿದ್ಯಾಭ್ಯಾಸ. ಅದಕ್ಕಾಗಿ ಹಣ, ಹೊಳೆಯಂತೆ ಹರಿಯುತ್ತಿದೆ. ಅದಕ್ಕೆ ಹೊಸ ಪಾಲಿಸಿಯೂ ಬಂದಿದೆ, ಹಳೆಯ ಪಾಲಿಸಿ ಇತ್ತೇ ? ಹೊಸ ಪಾಲಿಸಿ ಎಷ್ಟರ ಮಟ್ಟಿಗೆ ಅಸಂಪ್ಯಾನಕ್ಕೆ ಬಂದಿದೆ ? ಸ್ವಾತಂತ್ರ್ಯ ಬಂದಿದ್ದರಿಂದ ದೊಡ್ಡ ಅನುಕೂಲವಾಗಿದೆ. ಒಂದು ವರ್ಗಕ್ಕೆ ಶೇ. 80 ಅಂಕಗಳು ಬಂದಿದ್ದರೂ, ಅವರಿಗೆ ಸೀಟು ಸಿಕ್ಕದೆ ಹೋಗಬಹುದು. ಇಪ್ಪತ್ತೈದು'ಸಾವಿರವಿದ್ದರೆ ಶೇ. 40 ಬಂದಿದ್ದರೂ ಸೀಟು ಸಿಗಬಹುದು. ಇದಲ್ಲವೇ ಸಮತೆ ?

ಇದು ಸರಳ ಸಮಸ್ಯೆಯಲ್ಲ. ಏಕೆಂದರೆ ಸ್ವತಂತ್ರ ರಾಷ್ಟ್ರದಲ್ಲಿ ಎಲ್ಲ ಸಮಸ್ಯೆಗಳೂ ಸಂಕೀರ್ಣವಾಗುತ್ತಾ ಹೋಗುತ್ತವೆ. ಜೀವನ ಜಟಿಲವಾಗುತ್ತಾ ಹೋಗುತ್ತದೆ. ಏಕೆಂದರೆ ಸರಳವಾದದ್ದನ್ನು ಜಟಿಲಗೊಳಿಸುವುದೇ ಸ್ವಾತಂತ್ರ್ಯ. ಹೀಗಾಗಿ ಇಪ್ಪತ್ತು ಪುಸ್ತಕಗಳ ಕತ್ತೆ ಹೊರೆ ಹೊತ್ತು ಹೋಗುವವರಿಗೂ ಮಾತೃ ಭಾಷೆಯಲ್ಲಿ ಓದಲು ಬರೆಯಲು ಬರದ ಹಾಗಾಗುತ್ತದೆ. ಆಗ ವಿಶಾಲ ಮನೋಭಾವದ ಅಗತ್ಯತೆಯನ್ನು ಒತ್ತಿ ಹೇಳಲಾಗುತ್ತದೆ. ಒಂದೇ ದಿನ ಒಂದೇ ಗಂಟೆಯಲ್ಲಿ ಇಪ್ಪತ್ತು ಸಾವಿರ ಜನ ಇಪ್ಪತ್ತು ಸಾವಿರ ವಿಷಯಗಳನ್ನು ಒತ್ತಿ ಒತ್ತಿ ಹೇಳುತ್ತಿದ್ದರೆ ಕೇಳುವವರ ಗತಿಯೇನು ?

ಅಂತರರಾಷ್ಟ್ರೀಯ ಸೌಹಾರ್ದ, ಭಾಷಾ ಸೌಹಾರ್ದ, ರಕ್ಷಣಾ ಸಿದ್ಧತೆ, ಶಾಂತಿಯ ಅಗತ್ಯ, ಭ್ರಷ್ಟಾಚಾರ ನಿರ್ಮೂಲನೆ, ಪಕ್ಷಕ್ಕೆ ಓಟು ಕೊಡುವುದು, ಪುರಾತನ ಸಂಸ್ಕೃತಿಯ ರಕ್ಷಣೆ, ಆಧುನಿಕತೆಯ ಅಗತ್ಯ, ಧರ್ಮದ ಹಿರಿಮೆ, ಧರ್ಮ ನಿರಪೇಕ್ಷತೆಯ ಗರಿಮೆ, ಶ್ರಮದ ಅಗತ್ಯ, ಮನರಂಜನೆಯ ಮಹತ್ವ, ಸಂಶೋಧನೆಯ ಜರೂರತ್ತು, ಸಂಶೋಧನೆಯ ಮಟ್ಟ ಕಾಪಾಡಿಕೊಳ್ಳುವುದರ ಜರೂರತ್ತು, ಇವುಗಳಲ್ಲಿ ಯಾವುದು ಜರೂರು, ಯಾವುದು ಅಲ್ಲ ಎಂದು ತಿಳಿದುಕೊಳ್ಳುವುದಾದರೂ ಹೇಗೆ ?

ಲೆಕ್ಕವಿಲ್ಲದಷ್ಟು ಶಾಲೆ ಕಾಲೇಜು, ವಿ.ವಿ. ಸಂಶೋಧನಾ ಕೇಂದ್ರಗಳಿದ್ದರೂ, ಮೌಲಿಕ ಸಾಧನೆ ಏನು ?

ಏನೂ ತಿಳಿಯುತ್ತಿಲ್ಲ. ತಲೆ ತಿರುಗುತ್ತಾ ಇದೆ, ಸುಸ್ತು.

ಮಾಡರೇಟರ್, ಮುಗಿಲೂಹಳ್ಳಿ

ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಏಕೆ ಹೋರಾಡಿದರು ಎಂಬುದೀಗ ಅಪ್ರಸ್ತುತ. ಹೋರಾಡಿದವರ ಹೋರಾಟಕ್ಕೆ ಜಯ ಸಿಕ್ಕಿತು. ಫಲ ನಮ್ಮದು.

ನಮಗೀಗ ಸ್ವಾತಂತ್ರ್ಯವಿದೆ. ಎಂದರೆ ಎಂದೋ ಒಂದು ದಿನ ಒಂದು ಡಬ್ಬಿಯೊಳಗೆ ಒಂದು ಚೀಟಿಯನ್ನು ಇಳಿಬಿಡಬಹುದು. ಮುಂದೆ ಬಹುಮತದಿಂದ ಆರಿಸಿ ಬಂದವನು ಆಡಿದುದು ನಮ್ಮ ಆಟ, ಮಾಡಿದುದು ನಮ್ಮ ಮಾಟ. ನಮಗಾಗಿ ಅದೆಷ್ಟೋ ಕೋಟಿ ರೂ. ಗಳು ಖರ್ಚಾಗುತ್ತವೆ. ಆದುದರಿಂದ ನಾವು ಸುಖವಾಗಿಯೇ ಇದ್ದೇವೆ, ಅದೆಷ್ಟೋ ಲಕ್ಷ ಕೋಟಿ ಸಾಲ ನಮ್ಮ ತಲೆಯ ಮೇಲಿದೆ ಅಭಿವೃದ್ಧಿ ಶೀಲ ದೇಶಗಳಲ್ಲಿ ಅದು ಅನಿವಾರ್ಯ ಬೆಲೆಗಳಿಗೆ ಏರುವ ಸ್ವಾತಂತ್ರ್ಯ ವಿದೆ. ಹಣದುಬ್ಬರಕ್ಕೆ ಅದೆಷ್ಟೋ ಪರ್ಸೆಂಟ್ ಏರುವ, ಇಳಿಯುವ ಸ್ವಾತಂತ್ರ್ಯವಿದೆ. ಮಳೆಗೆ ಬರುವ ಅಥವಾ ಬಿಡುವ ಸ್ವಾತಂತ್ರ್ಯವಿದೆ. ನಮ್ಮ ಹಣಕ್ಕೆ ಜೇಬಿನಲ್ಲಿ ಸಾಕಷ್ಟಿಲ್ಲದಿರಲು ಸ್ವಾತಂತ್ರ್ಯವಿದೆ,

ವಿಶ್ವಾದ್ಯಂತ ಇರುವ ಕಪ್ಪುಹಣ ಪ್ರಸರಣ ಭ್ರಷ್ಟಾಚಾರಗಳು ವಿಶ್ವದಲ್ಲೇ ಇರುವ ನಮ್ಮ ದೇಶದಲ್ಲೂ ಇದೆ. ಶ್ರೀ ರಾಮ ಶ್ರೀ ಕೃಷ್ಣರ ಜನ್ಮಭೂಮಿ ಹಿಂದು ಗಳದ್ದಲ್ಲವೆಂಬ ವಿವಾದವಿರುವುದರಿಂದ ನಮ್ಮದು ಧರ್ಮ–ನಿರಪೇಕ್ಷ ರಾಷ್ಟ್ರ (ಅಧರ್ಮ ರಾಷ್ಟ್ರವಲ್ಲ). ವೈಯಕ್ತಿಕ ಶೀಲಕ್ಕೆ ಬೆಲೆಯಿಲ್ಲ. ಹಣ, ಅಧಿಕಾರ ಗಳಿದ್ದರೆ ಆಯಿತು,


ಮುಷ್ಕರ, ಹಿಂಸಾಚಾರ, ಭಯೋತ್ಪಾದನೆಗಳೂ ವಿಶ್ವಾದ್ಯಂತ ಇರುವುದ ರಿಂದ ನಮ್ಮಲ್ಲಿಯೂ ಇವೆ. ವಿಚಾರಣೆ ನಡೆಸಲು ಲೆಕ್ಕವಿಲ್ಲದಷ್ಟು ಆಯೋಗ ಗಳಿವೆ. ದೈನಂದಿನ ಜೀವನ ದುಸ್ತರ ; ಭಯ, ಹಿಂಸೆ, ಅನುಮಾನಗಳಿಂದ ತುಂಬಿದೆ. ಅವು ವಿಶ್ವದ ಎಲ್ಲೆಡೆಯೂ ಇವೆ. ಆದುದರಿಂದ ನಾವು ಮಾನವಕುಲದ mainstreamಗೆ ಸೇರಿದ್ದೇವೆ.

ಸತ್ಯ. ಅಹಿಂಸೆ ಇವೆಲ್ಲಾ ಭಾಷಣಗಳಲ್ಲಿವೆ. ಸ್ವಾವಲಂಬನೆಯತ್ತ ನಾವು ಸಾಗುತ್ತಿರುವುದಕ್ಕೆ ಆಮದು ಹೆಚ್ಚಾಗುತ್ತಿರುವುದೇ ಸಾಕ್ಷಿ.

ವಾಕ್ ಸ್ವಾತಂತ್ರ್ಯ ಜನತೆಯ ಪ್ರತಿನಿಧಿಗಳಿಗಿದೆ. ಆದುದರಿಂದ ನಮ್ಮದು ಆದರ್ಶ ರಾಷ್ಟ್ರ, ರಾಜ್ಯ. ನಾವು ಮುಂದೆ ಮುಂದೆ ಕಾಲದೊಡನೆ ನುಗ್ಗುತ್ತಿದ್ದೇವೆ. ದೇವರ ದಯೆಯಿಂದ ಕಾಲವು ಹಿಂದೆ ಹಿಂದೆ ಹೋಗುತ್ತಿಲ್ಲ. ಇನ್ನು ಹನ್ನೆರಡು ವರ್ಷ ಕಳೆದರೆ ಸಾಕು. ನಾವು ಮುಂದಿನ ಶತಮಾನಕ್ಕೆ ಎದೆ ಸೆಟೆಸಿ, ಹೆಮ್ಮೆಯಿಂದ ಕಾಲಿಡುತ್ತೇವೆ. ನಾವು ನಮ್ಮ ಪ್ರಭುಗಳು. ನಾವು ಅನುಭವಿಸುವುದೇ ಸ್ವಾತಂತ್ರ್ಯದ ಫಲ.


ವಾಕ್ ಸ್ವಾತಂತ್ರ್ಯವಿದೆ. ಅಭಿಪ್ರಾಯ ಸ್ವಾತಂತ್ರ್ಯವಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಅದನ್ನು ನಂಬಲು, ಬಿಡಲು ನಮಗೆ ಸ್ವಾತಂತ್ರ್ಯವಿದೆ. ಇದ ಕ್ಕಿಂತ ಹೆಚ್ಚಿನದೇನು ಬೇಕು ? ಬರೀ ಇದೇ ಅಲ್ಲ. ನಾವು ಆಕಾಶದಲ್ಲಿ ಉಪಗ್ರಹ ಹಾರಿಸಿದ್ದೇವೆ. ಅಂಟಾರ್ಟಿಕಾದಲ್ಲಿ ನೆಲೆಯೂರಿದ್ದೇವೆ. ಅಣುವನ್ನು ಒಡೆ ದಿದ್ದೇವೆ. ಅಲಿಪ್ತ ನೀತಿಯನ್ನು ಜಗತ್ತಿಗೆ ಕೊಟ್ಟಿದ್ದೇವೆ. ಶಾಂತಿ ಸಂದೇಶವನ್ನು ಹರಡುತ್ತಿದ್ದೇವೆ. ಸುತ್ತಮುತ್ತಿನ ರಾಷ್ಟ್ರಗಳ ದಂಗೆಗಳನ್ನು ಸ್ವಂತ ಖರ್ಚಿನಿಂದ ಅಡಗಿಸುತ್ತಿದ್ದೇವೆ.

ಚರಂಡಿ ನೀರನ್ನು ಬೀದಿಗೆ ಹರಿಸುತ್ತಾ ಇದ್ದೇವೆ. ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿದ್ದೇವೆ. ಅತಿವೃಷ್ಟಿ ಅನಾವೃಷ್ಟಿಗಳ ವಿರುದ್ಧ...ಉಂ.... ಏನು ಮಾಡುತ್ತಿದ್ದೇವೆ ? ತೊಗರಿಬೇಳೆಗೆ ಒಂದು ಕೆ.ಜಿ.ಗೆ 20ರೂ. ತೆರುತ್ತಿದ್ದೇವೆ.



ಶುಭಾಶಯಗಳೊಂದಿಗೆ :

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜನ್ಸೀಸ್

ಬೆಂಗಳೂರು

REGISTERED No. BGW-180

Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVA KUMAR.